# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಮಂಗಳವಾರ, ಜುಲೈ 27, 2021

ಸಂಪುಟ : 48  ಸಂಚಿಕೆ : 74  ☎ 254736  91642 99999  RNI No: 27369/75  KA/SK/CTA-275/2021-2023. O/P @ J.D. Circle P.O.  ಪುಟ : 4  ರೂ : 4.00  www.janathavani.com  janathavani@mac.com




**ಬಿಎಸ್‌ವೈ ಅಧ್ಯಾಯಕ್ಕೆ ತೆರೆ ಎಳೆದ ಹೈಕಮಾಂಡ್**

**ಹರಿಹರ : ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಮ್ಮ ಹುದ್ದೆಗೆ ರಾಜೀನಾಮೆ ಪ್ರಕಟಿಸಿದ ಸಂದರ್ಭದಲ್ಲೇ ಇಲ್ಲಿನ ನಗರಸಭೆ ಮುಂಭಾಗ ದಲ್ಲಿ ಅವರ ಚಿತ್ರ ಇದ್ದ ಬ್ಯಾನರ್ ಅನ್ನು ಸಿಬ್ಬಂದಿ ತೆರವುಗೊಳಿಸಿದರು.**

## ಯಡಿಯೂರಪ್ಪ ವಿದಾಯ

### ವರಿಷ್ಠರ ಆಣತಿಯತೆ ರಾಜೀನಾಮೆ ಪ್ರಕಟ, ಬಹುದಿನಗಳ ರಾಜಕೀಯ ಪ್ರಹಸನಕ್ಕೆ ತೆರೆ

ಬೆಂಗಳೂರು, ಜು. 26- ವರಿಷ್ಠರ ಸೂಚನೆಯಂತೆ ಮುಖ್ಯಮಂತ್ರಿ ಸ್ಥಾನಕ್ಕೆ ಬಿ.ಎಸ್. ಯಡಿಯೂರಪ್ಪ ಸೋಮವಾರ ರಾಜೀನಾಮೆ ನೀಡಿದ್ದಾರೆ. ಆ ಮೂಲಕ ಸುಮಾರು ದಿನಗಳಿಂದ ನಡೆಯುತ್ತಿದ್ದ ರಾಜಕೀಯ ಪ್ರಹಸನಕ್ಕೆ ತೆರೆ ಬಿದ್ದಿದೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಎರಡು ವರ್ಷಗಳ ಸಾಧನೆಯ ಹೊತ್ತಿಗೆ ಬಿಡುಗಡೆ ಮಾಡಿ, ಸಚಿವ ಸಹೋದ್ಯೋಗಿಗಳು, ಶಾಸಕರು ಹಾಗೂ ಅಧಿಕಾರಿಗಳೊಂದಿಗಿನ ಔತಣಕೂಟದಲ್ಲಿ ಭಾಗವಹಿಸಿದ ನಂತರ ನೇರವಾಗಿ ರಾಜಭವನಕ್ಕೆ ತೆರಳಿ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದರು.

ಯಡಿಯೂರಪ್ಪ ರಾಜೀನಾಮೆ ಅಂಗೀಕರಿಸಿದ ರಾಜ್ಯ ಪಾಲರು, ಮುಂದಿನ ವ್ಯವಸ್ಥೆ ಆಗುವವರೆಗೆ ಹುದ್ದೆಯಲ್ಲಿ ಮುಂದುವರೆಯುವಂತೆ ಸೂಚಿಸಿ, ಸಂಪುಟವನ್ನು ವಿಸರ್ಜಿಸಿದರು.

ಕರ್ನಾಟಕದಲ್ಲಿ ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ಯಡಿಯೂರಪ್ಪ ಆಡಳಿತ ನಡೆಸಿದರಾದರೂ ಎಂದೂ ಅವರು ಪೂರ್ಣಾವಧಿ ಮುಖ್ಯಮಂತ್ರಿ ಆಗಲಿಲ್ಲ.

ರಾಜೀನಾಮೆ ಸಲ್ಲಿಸುವುದಕ್ಕೂ ಮುನ್ನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪುಸ್ತಕ ಬಿಡುಗಡೆ ಮಾಡಿ ತಮ್ಮ ಸಹೋದ್ಯೋಗಿಗಳು, ಶಾಸಕರು, ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುವ ಸಂದರ್ಭದಲ್ಲೇ ಭಾವೋದ್ವೇಗ ಗೊಂಡ ಯಡಿಯೂರಪ್ಪ ಕಣ್ಣಂಚಿನಲ್ಲಿ ನೀರು ತಂದು ಕೊಂಡು, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನಿರ್ಧಾರ ವನ್ನು ಮೊದಲ ಬಾರಿಗೆ ಅಧಿಕೃತವಾಗಿ ಪ್ರಕಟಿಸಿದರು.

ಇಡೀ ರಾಷ್ಟ್ರದಲ್ಲಿ 75 ವರ್ಷ ಮೀರಿದವರಿಗೆ ಬಿಜೆಪಿಯಲ್ಲಿ ಅಧಿಕಾರ ನೀಡಿಲ್ಲ, ಆದರೆ, (2ನೇ ಪುಟಕ್ಕೆ)

### ಮತ್ತೆ ಬಿಜೆಪಿ ಅಧಿಕಾರಕ್ಕೆ ತರುವೆ

**ಸ್ನೇಹಿತರ ಜೊತೆಗೂಡಿ ಬಿಜೆಪಿ ಕಟ್ಟಿ, ಕರ್ನಾಟಕದಲ್ಲಿ ಈ ಮಟ್ಟಕ್ಕೆ ತಂದಿದ್ದೇನೆ, ಇದೀಗ ಅಧಿಕಾರ ತ್ಯಜಿಸಿ, ರಾಜ್ಯದಲ್ಲಿ ಪಕ್ಷ ಸಂಘಟಿಸಿ ಮತ್ತೆ ಅಧಿಕಾರಕ್ಕೆ ತರುತ್ತೇನೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮಿತ್ ಷಾ ಅವರ ಜೋಡಿ ಮುಂಬರುವ ಚುನಾವಣೆಯಲ್ಲಿ ಮತ್ತೆ ಅಧಿಕಾರದ ಗದ್ದುಗೆ ಹಿಡಿದು ರಾಷ್ಟ್ರವನ್ನು ಮತ್ತಷ್ಟು ಬಲಿಷ್ಠಗೊಳಿಸುವಲ್ಲಿ ಅವರಿಗೆ** (2ನೇ ಪುಟಕ್ಕೆ)

### ಹಲ್ಲೆ ಮಾಡಿ ಕಥೆ ಮುಗಿಯಿತೆಂದು ಹೋದರು

**ಮಂಡ್ಯದ ಎಲ್ಲೋ ಇರುವ ಬೂಕಿನಕೆರೆಯಿಂದ ಶಿಕಾರಿಪುರಕ್ಕೆ ಹೋಗಿ ಆರ್‌ಎಸ್‌ಎಸ್ ಸ್ವಯಂ ಸೇವಕನಾಗಿ, ಪ್ರಚಾರಕನಾಗಿ ಪಕ್ಷ ಸಂಘಟಿಸಿ, ಅಲ್ಲಿನ ಪುರಸಭೆಗೆ ಸದಸ್ಯನಾಗಿ ಆಯ್ಕೆಗೊಂಡು ಅಧ್ಯಕ್ಷನಾದೆ. ನನ್ನ ಮನೆಯಿಂದ ಪುರಸಭೆಗೆ ತೆರಳುತ್ತಿದ್ದ ಸಂದರ್ಭದಲ್ಲಿ ನನ್ನ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದರು. ನನ್ನ ಕಥೆ ಮುಗಿಯಿತೆಂದು ತಿಳಿದು ಹಲ್ಲೆ ಮಾಡಿದವರು ಹೊರಟು ಹೋದರು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ. ಬದುಕುಳಿದ ನಾನು, ರೈತ ಮತ್ತು** (2ನೇ ಪುಟಕ್ಕೆ)



**ಎರಡು ವರ್ಷಗಳ ಸಾಧನೆಯ ಹೊತ್ತಿಗೆ ಬಿಡುಗಡೆ ಮಾಡುವ ಕಾರ್ಯಕ್ರಮದಲ್ಲಿ ಕಣ್ಣಂಚಿನಲ್ಲಿ ನೀರು ತಂದು ಕೊಂಡು ರಾಜೀನಾಮೆ ನಿರ್ಧಾರ ಅಧಿಕೃತವಾಗಿ ಪ್ರಕಟಿಸಿದ ಯಡಿಯೂರಪ್ಪ**

## ರಾಜಕೀಯ ನಿವೃತ್ತಿ ಇಲ್ಲ

ಬೆಂಗಳೂರು, ಜು. 26- ಮುಖ್ಯಮಂತ್ರಿ ಹುದ್ದೆ ತ್ಯಜಿಸಿದರೂ ರಾಜಕೀಯ ನಿವೃತ್ತಿ ಇಲ್ಲ, ಸಕ್ರಿಯ ರಾಜಕಾರಣದಲ್ಲಿ ಮುಂದುವರೆ ಯುತ್ತೇನೆ ಎಂದು ಬಿ.ಎಸ್.ಯಡಿಯೂರಪ್ಪ ಇಂದಿಲ್ಲಿ ಪ್ರಕಟಿಸಿದ್ದಾರೆ.

ರಾಜ್ಯಪಾಲರಿಗೆ ರಾಜೀನಾಮೆ ನೀಡಿ ಹೊರಬಂದ ನಂತರ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಯಡಿಯೂರಪ್ಪ, ಸ್ವಯಂ ಪ್ರೇರಿತವಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ, ಎರಡು ತಿಂಗಳ ಹಿಂದೆಯೇ ಮುಖ್ಯಮಂತ್ರಿ ಸ್ಥಾನ ತ್ಯಜಿಸಲು ನಿರ್ಧರಿಸಿದ್ದೆ ಎಂದಿದ್ದಾರೆ.

ಸರ್ಕಾರಕ್ಕೆ ಎರಡು ವರ್ಷ ಪೂರ್ಣಗೊಳ್ಳುವ ಸಂದರ್ಭದಲ್ಲಿ ರಾಜೀನಾಮೆ ನೀಡಲು ತೀರ್ಮಾನ ಕೈಗೊಂಡು (2ನೇ ಪುಟಕ್ಕೆ)

## ಮುಂದಿನ ನಾಯಕನ ಆಯ್ಕೆ ವರಿಷ್ಠರಿಗೆ ಸವಾಲು

ಬೆಂಗಳೂರು, ಜು. 26- ರಾಜ್ಯದಲ್ಲಿ ಬಿಜೆಪಿ ಅಸ್ತಿತ್ವವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೊಸ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವ ಸವಾಲು ಪಕ್ಷದ ದೆಹಲಿ ವರಿಷ್ಠರ ಮೇಲಿದೆ.

ಬಿ.ಎಸ್.ಯಡಿಯೂರಪ್ಪ ಅವರ ವರ್ಚಸ್ಸಿಗೆ ಸಮವಾಗಿ ನಿಲ್ಲುವಂತಹ ನಾಯಕರು ರಾಜ್ಯ ಬಿಜೆಪಿಯಲ್ಲಿಲ್ಲ.

ಇವರಿಗೆ ಸಮನಾಗಿ ಅಲ್ಲದಿದ್ದರೂ, ಪಕ್ಷ ಸಂಘಟಿಸಿ ಸರ್ಕಾರವನ್ನು ಮುನ್ನಡೆಸುವುದಲ್ಲದೆ, 2023 ರ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರುವಂತಹ ನಾಯಕ ಬೇಕಿದೆ. ಇಂತಹ ನಾಯಕನಿಗಾಗಿ (2ನೇ ಪುಟಕ್ಕೆ)

## ಜಲಾಶಯದಿಂದ ನದಿಗೆ ನೀರು: ಎಚ್ಚರ

ದಾವಣಗೆರೆ, ಜು. 26- ಭದ್ರಾ ಜಲಾಶಯದ ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆಯಾಗುತ್ತಿದ್ದು, ಒಳಹರಿವು ಹೆಚ್ಚಿರುವ ಕಾರಣ ಯಾವುದೇ ಸಮಯದಲ್ಲಿ ಜಲಾಶಯದಿಂದ ನದಿಗೆ ನೀರು ಬಿಡುವ ಸಾಧ್ಯತೆಗಳಿದ್ದು, ನದಿ ಪಾತ್ರದ ಜನರು ಎಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ. ಭದ್ರಾ ಜಲಾನಯ ಪ್ರದೇಶದಲ್ಲಿ ಸತತವಾಗಿ ಮಳೆ ಬೀಳುತ್ತಿದ್ದು, ಜಲಾಶಯಕ್ಕೆ ಬರುತ್ತಿರುವ ನೀರಿನ (2ನೇ ಪುಟಕ್ಕೆ)

## ಕಾಲೇಜು ಕಡೆ ವಿದ್ಯಾರ್ಥಿಗಳ ನಡೆ

### ಕೊರೊನಾ ಸೋಂಕಿನಿಂದಾಗಿ ಬಂದ್ ಆಗಿದ್ದ ಪದವಿ ಕಾಲೇಜುಗಳು ಪುನರಾರಂಭ



ದಾವಣಗೆರೆ, ಜು. 26 - ಕೊರೊನಾದಿಂದಾಗಿ ಬಂದ್ ಆಗಿದ್ದ ಪದವಿ ಹಾಗೂ ಸ್ನಾತಕೋತ್ತರ ನೇರ ತರಗತಿಗಳು ಸೋಮವಾರದಿಂದ ಪುನರಾರಂಭವಾಗಿವೆ. ಲಸಿಕೆ ಪಡೆದುಕೊಂಡಿರುವ ವಿದ್ಯಾರ್ಥಿಗಳು ಹೊಸ ಉತ್ಸಾಹದಿಂದ ಕಾಲೇಜಿನ ಕಡೆ ಹೆಜ್ಜೆ ಹಾಕಿದ್ದಾರೆ.

ಏಪ್ರಿಲ್ 27ರಿಂದ ಹೇರಲಾಗಿದ್ದ ಲಾಕ್‌ಡೌನ್‌ನಿಂದಾಗಿ ಶಾಲಾ - ಕಾಲೇಜುಗಳು ಬಂದ್ ಆಗಿದ್ದವು. ಮೂರು ತಿಂಗಳ ನಂತರ ಕಾಲೇಜಿನ ಬಾಗಿಲು ವಿದ್ಯಾರ್ಥಿಗಳಿಗೆ ತೆರೆದಿದೆ. ನಗರದ 23 ಪದವಿ ಕಾಲೇಜುಗಳೂ ಸೇರಿದಂತೆ ಜಿಲ್ಲೆಯ 40 ಕಾಲೇಜುಗಳು ಆರಂಭ ಕಂಡಿವೆ.

ಇದೇ ವೇಳೆ ಪಿಯುಸಿ ಮುಗಿಸಿರುವ ವಿದ್ಯಾ ರ್ಥಿಗಳು ಪ್ರವೇಶಕ್ಕಾಗಿ ಅರ್ಜಿಗಳನ್ನು ಪಡೆಯಲು (3ನೇ ಪುಟಕ್ಕೆ)

**ಈ ಬಾರಿ ಆನ್‌ಲೈನ್‌ನಲ್ಲಿ ಪದವಿ ಪ್ರವೇಶಕ್ಕೆ ರಾಜ್ಯ ಸರ್ಕಾರ ಆನ್‌ಲೈನ್ ತಂತ್ರಾಂಶ ರೂಪಿಸಿದೆ. ಶುಲ್ಕ ಯಾವ ರೀತಿ ಇರಲಿದೆ ಎಂಬುದೂ ಇತ್ಯರ್ಥವಾಗಿಲ್ಲ. ಪಠ್ಯೇತರ ಚಟುವಟಿಕೆಗಳಿಗೆ ಶುಲ್ಕ ಪಡೆಯಬಹುದೇ - ಬೇಡವೇ ಎಂಬುದು ಅಸ್ಪಷ್ಟವಾಗಿದೆ. ಹೀಗಾಗಿ ಸದ್ಯಕ್ಕೆ ಪ್ರವೇಶ ಪ್ರಕ್ರಿಯೆ ನಡೆಯುತ್ತಿಲ್ಲ. ಪ್ರವೇಶದ ಅರ್ಜಿಗಳನ್ನು ಮಾತ್ರ ವಿತರಿಸುತ್ತಿದ್ದೇವೆ.**

**- ಡಾ.ಬಿ.ಪಿ. ಕುಮಾರ್,
ಎ.ವಿ.ಕೆ. ಕಾಲೇಜು ಪ್ರಾಂಶುಪಾಲ**

## ಬೇಳೆ ಆಮದು ಸುಂಕ ರದ್ದು

ನವದೆಹಲಿ, ಜು. 26 – ಬೇಳೆಗಳ ಪೂರೈಕೆ ಹೆಚ್ಚಿಸುವ ಸಲುವಾಗಿ ಕೇಂದ್ರ ಸರ್ಕಾರ ಮಸೂರ್ ಬೇಳೆಯ ಆಮದು ಸುಂಕವನ್ನು ರದ್ದುಗೊಳಿಸಿದೆ. ಈ ಇಳಿಕೆ ಮಂಗಳವಾರ ದಿಂದಲೇ ಜಾರಿಗೆ ಬರಲಿದೆ.

ಈ ಬಗ್ಗೆ ಸಂಸತ್ತಿನ ಉಭಯ ಸದನಗಳಲ್ಲಿ ಹೇಳಿಕೆ ನೀಡಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾ ರಾಮನ್, ಬೇಳೆಯ ಮೇಲಿನ ಮೂಲ ಆಮದು ಸುಂಕವನ್ನು ಶೇ.10 ರಿಂದ ಸೊನ್ನೆಗೆ ಇಳಿಸಲಾಗಿದೆ. ಕೃಷಿ ಮೂಲಭೂತ ಸೌಲಭ್ಯ ಅಭಿವೃದ್ಧಿ ಸೆಸ್ ಅನ್ನು ಈಗಿರುವ ಶೇ.20ರಿಂದ ಶೇ.10ಕ್ಕೆ ಇಳಿಸಲಾಗಿದೆ. ಒಟ್ಟಾರೆ ಮಸೂರ್ ಬೇಳೆಯ ಮೇಲಿನ ತೆರಿಗೆ ಶೇ.30ರಿಂದ ಶೇ.10ಕ್ಕೆ ಇಳಿಯಲಿದೆ ಎಂದು ತಿಳಿಸಿದ್ದಾರೆ.

## ರಾಜೀನಾಮೆ ಮುನ್ನ ತುಟ್ಟಿಭತ್ಯೆ ಹೆಚ್ಚಳ

ಬೆಂಗಳೂರು, ಜು. 26 - ಬಿ.ಎಸ್. ಯಡಿಯೂರಪ್ಪ ಅಧಿಕಾರ ತ್ಯಜಿಸುವ ಮುನ್ನ ರಾಜ್ಯ ಸರ್ಕಾರಿ ನೌಕರರಿಗೆ ಬಂಪರ್ ಕೊಡುಗೆ ನೀಡಿದ್ದಾರೆ.

ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಸಲ್ಲಿಸುವುದಕ್ಕೂ ಮುನ್ನ ಕೆಲವು ಪ್ರಮುಖ ಆದೇಶಗಳನ್ನು ಹೊರಡಿಸಿದ್ದು ಸರ್ಕಾರಿ ನೌಕರರ ತುಟ್ಟಿ ಭತ್ಯೆಯನ್ನು ಶೇಕಡ 10.25 ರಷ್ಟು ಹೆಚ್ಚಳ (2ನೇ ಪುಟಕ್ಕೆ)

## ಗಡಿ ಸಂಘರ್ಷ ಉಲ್ಬಣ; ಆರು ಪೊಲೀಸರ ಸಾವು

ಗುವಾಹತಿ/ಐಜಾವ್ಲ್, ಜು. 26 – ಮಿಜೋರಾಂ ಜೊತೆಗಿನ 'ಸಂವಿಧಾನಾತ್ಮಕ ಗಡಿ'ಯನ್ನು ರಕ್ಷಿಸಿಕೊಳ್ಳುವ ಹೋರಾಟದಲ್ಲಿ ಅಸ್ಸಾಂನ ಆರು ಜನ ಪೊಲೀಸರು ಹತರಾಗಿದ್ದಾರೆ ಮತ್ತು ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ 60ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದರಿಂದಾಗಿ ಈಶಾನ್ಯದ ರಾಜ್ಯಗಳಲ್ಲಿನ ಗಡಿ ಸಂಘರ್ಷ ತೀವ್ರವಾಗಿದೆ.

ಈ ಬಗ್ಗೆ ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವ ಶರ್ಮ ಹಾಗೂ ಮಿಜೋರಾಮ್ ಮುಖ್ಯಮಂತ್ರಿ ಜೊರಮತಂಗ ಜೊತೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಪ್ರತ್ಯೇಕವಾಗಿ ಮಾತನಾಡಿದ್ದು, ವಿವಾದಿತ ಗಡಿಯಲ್ಲಿ ಶಾಂತಿ ಕಾಯ್ದುಕೊಳ್ಳಬೇಕು ಹಾಗೂ ಸೌಹಾರ್ದಯುತವಾಗಿ ಸಮಸ್ಯೆ ಬಗೆಹರಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಅಸ್ಸಾಂ ಬಾರಕ್ ಕಣಿವೆ ಜಿಲ್ಲೆಗಳಾದ ಚಚರ್, (3ನೇ ಪುಟಕ್ಕೆ)

## ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ರಾಹುಲ್ ಟ್ರ್ಯಾಕ್ಟರ್ ಪ್ರತಿಭಟನೆ

ನವದೆಹಲಿ, ಜು. 26 – ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಒತ್ತಾಯಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಟ್ರ್ಯಾಕ್ಟರ್ ಏರಿ, ಪಕ್ಷದ ಸಂಸದರ ಜೊತೆಗೆ ಸಂಸತ್ತಿನ ಕಡೆಗೆ ಪ್ರತಿಭಟನೆ ನಡೆಸಿದ್ದಾರೆ.

ಅವರ ಜೊತೆ ಸಂಸದರಾದ ಪ್ರತಾಪ್ ಸಿಂಗ್ ಬಾಜ್ವಾ, ರವನೀತ್ ಸಿಂಗ್ ಬಿಟ್ಟು ಹಾಗೂ ದೀಪಿಂದರ್ ಸಿಂಗ್ ಹೂಡ ಅವರು ಜೊತೆಗಿದ್ದು ಭಿತ್ತಿ ಪತ್ರಗಳನ್ನು ಹಿಡಿದು ಘೋಷಣೆ ಕೂಗಿದರು. ಇಬ್ಬರು - ಮೂವರು ಉದ್ಯಮಿಗಳಿಗೆ ನೆರವಾಗಲು ಕೃಷಿ ಕಾಯ್ದೆಗಳನ್ನು (2ನೇ ಪುಟಕ್ಕೆ)

## ಅಭಿನಯ ಶಾರದೆ ಜಯಂತಿ ಇನ್ನಿಲ್ಲ



ಬೆಂಗಳೂರು, ಜು. 26 – ಅಭಿನಯ ಶಾರದೆ ಎಂದೇ ಹೆಸರಾಗಿದ್ದ ಕನ್ನಡ ಚಿತ್ರರಂಗದ ಹಿರಿಯ ನಟಿ ಜಯಂತಿ ವಯೋಸಹಜ ಕಾಯಿಲೆಗಳಿಂದ ನಿಧನರಾಗಿದ್ದಾರೆ.

ಅಸ್ತಮಾದಿಂದ ಬಳಲುತ್ತಿದ್ದ 76 ವರ್ಷದ ನಟಿ ಜಯಂತಿ ಭಾನುವಾರ ತಡರಾತ್ರಿ ಕೊನೆಯುಸಿರೆಳೆದಿದ್ದಾರೆ.

ಅಮ್ಮ ತಡರಾತ್ರಿ ಕೊನೆಯುಸಿರೆಳೆದರು. ಕಳೆದ ಎರಡು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ತಡರಾತ್ರಿ ನಮ್ಮನ್ನಗಲಿದರು ಎಂದು ಜಯಂತಿ ಅವರ ಪುತ್ರ ಕೃಷ್ಣಕುಮಾರ್ ತಿಳಿಸಿದ್ದಾರೆ.

ಜನವರಿ 6, 1945 ರಂದು ಬಳ್ಳಾರಿಯಲ್ಲಿ ಜನಿಸಿದ್ದ ಜಯಂತಿ ಅವರ ಮೂಲ ಹೆಸರು ಕಮಲಾ ಕುಮಾರಿ. ಇವರ ತಂದೆ ಬಾಲಸುಬ್ರಹ್ಮಣ್ಯಂ ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ತಾಯಿ ಸಂತಾನಲಕ್ಷ್ಮಿ. ಚಿಕ್ಕವಯಸ್ಸಿನಲ್ಲೇ ಚಿತ್ರೀಕರಣದ ಸ್ಟುಡಿಯೋಗಳಿಗೆ ತೆರಳುತ್ತಿದ್ದ ಬಾಲಕಿ ಕಮಲಾ ಕುಮಾರಿ ಸಿನಿಮಾ ಸೆಳೆತಕ್ಕೆ (3ನೇ ಪುಟಕ್ಕೆ)









## 11 ಪಾಸಿಟಿವ್, 19 ಗುಣಮುಖ

ದಾವಣಗೆರೆ, ಜು. 26- ಜಿಲ್ಲೆಯಲ್ಲಿ ಸೋಮವಾರ 11 ಜನರಲ್ಲಿ ಕೊರೊನಾ ಸೋಂಕು ದೃಢ ಪಟ್ಟಿದ್ದು, 19 ಜನರು ಗುಣಮುಖ ರಾಗಿದ್ದಾರೆಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಾವ ಣಗೆರೆ ತಾಲ್ಲೂಕಿನಲ್ಲಿ 5, ಹರಿಹರ 2, ಚನ್ನಗಿರಿ 2 ಹಾಗೂ ಹೊರ ಜಿಲ್ಲೆಯ ಇಬ್ಬರಲ್ಲಿ ಸೋಂಕು ಕಾಣಿಸಿ ಕೊಂಡಿದೆ. ಜಿಲ್ಲೆಯಲ್ಲಿ 294 ಸಕ್ರಿಯ ಪ್ರಕರಣಗಳಿವೆ. (3ನೇ ಪುಟಕ್ಕೆ)

**ಭದ್ರಾ ಜಲಾಶಯ**

ಇಂದಿನ ಮಟ್ಟ : 179 ಅಡಿ 3 ಇಂಚು
ಒಳ ಹರಿವು: 24770 ಕ್ಯೂಸೆಕ್ಸ್
ಹೊರ ಹರಿವು : 1067 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 154 ಅಡಿ

## ಅಶೋಕ ರಸ್ತೆ ಗುಂಡಿಗಳ ಸಮಸ್ಯೆಗೆ ತಿಂಗಳಲ್ಲಿ ಶಾಶ್ವತ ಪರಿಹಾರ

### ತಾತ್ಕಾಲಿಕವಾಗಿ ರಸ್ತೆ ರಿಪೇರಿ: ಮೇಯರ್ ಎಸ್.ಟಿ. ವೀರೇಶ್

ದಾವಣಗೆರೆ, ಜು.26- ನಗರದ ಮಹಾತ್ಮ ಗಾಂಧಿ ವೃತ್ತದಿಂದ ರೈಲ್ವೇ ಗೇಟ್ ವರೆಗಿನ ಅಶೋಕ ರಸ್ತೆಯನ್ನು ಸಿಮೆಂಟ್ ರಸ್ತೆಯನ್ನಾಗಿ ಮಾಡಿ, ಫುಟ್ ಪಾತ್ ಹಾಗೂ ಸ್ಟ್ರೀಟ್ ಲೈಟ್ ಅಳವಡಿಸುವ ಕಾಮಗಾರಿಯನ್ನು ಒಂದು ತಿಂಗಳೊಳಗೆ ಆರಂಭಿಸುವುದಾಗಿ ಮಹಾನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಹೇಳಿದ್ದಾರೆ.

ಮಹಾನಗರ ಪಾಲಿಕೆ, ಸ್ಮಾರ್ಟ್ ಸಿಟಿ ಹಾಗೂ ರೈಲ್ವೇ ಇಲಾಖೆಯ ಎಂಜಿನಿಯರ್‌ಗಳೊಂದಿಗೆ ಸೋಮವಾರ ರಸ್ತೆ ಪರಿಶೀಲನೆ ನಡೆಸಿ ಚರ್ಚಿಸಿದ ನಂತರ ಅವರು 'ಜನತಾವಾಣಿ'ಯೊಂದಿಗೆ ಮಾತನಾಡಿದರು.

ಕಳೆದ ಎರಡು ದಶಕಗಳ ಸಮಸ್ಯೆ ಇದಾಗಿದ್ದು, ರೈಲ್ವೇ ಅಂಡರ್ ಪಾಸ್ ನಿರ್ಮಾಣ ಸೇರಿದಂತೆ ವಿವಿಧ ಕಾರಣಗಳಿಂದಾಗಿ ರಸ್ತೆ ಅಭಿವೃದ್ಧಿಯಾಗಿರಲಿಲ್ಲ. (3ನೇ ಪುಟಕ್ಕೆ)

**ದಾವಣಗೆರೆ ನಗರದಲ್ಲಿ ಸಾವಿರಾರು ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದರೂ ಗಾಂಧಿ ವೃತ್ತದಿಂದ ರೈಲ್ವೇ ಗೇಟ್ ವರೆಗಿನ ತುಂಡು ರಸ್ತೆ ಮಾತ್ರ ರಿಪೇರಿ ಭಾಗ್ಯ ಕಂಡಿರಲಿಲ್ಲ. ಮಳೆಗಾಲದಲ್ಲಂತೂ ವಾಹನ ಸಂಚಾರಕ್ಕೆ ಹಾಗೂ ಪಾದಚಾರಿಗಳಿಗೆ ತೀವ್ರತರವಾದ ತೊಂದರೆಯಾಗುತ್ತಿತ್ತು. ಸಾರ್ವಜನಿಕರಿಂದ ಅನೇಕ ದೂರುಗಳು ಬರುತ್ತಿದ್ದವು.**

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಮನೆ ಲೀಸ್‌ಗಿದೆ**
ವಿದ್ಯಾನಗರ 12ನೇ ಕ್ರಾಸ್ # 1645/108 2 BHK ಮನೆ, 2ನೇ ಮಹಡಿ ಲೀಸ್‌ಗೆ ಇದೆ. ಸಂಪರ್ಕಿಸಿ
99007 58541

**ಹೊಸ ಹೊಸ ಮನೆಗಳು ಮಾರಾಟಕ್ಕಿವೆ**
40x60 West, 2 ಬೆಡ್‌ರೂಂ ಮನೆ ಸಿದ್ದವೀರಪ್ಪ ಬಡಾವಣೆಯಲ್ಲಿ, 30x50 North, 4 ಬೆಡ್‌ರೂಮ್ ಮನೆ ಡೂಪ್ಲೆಕ್ಸ್ ಮನೆ ಸರಸ್ವತಿ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್, ಮನೆ ಬೇಕಾಗಿದೆ**
ಶಿವಮೊಗ್ಗದಲ್ಲಿ ಸೈಟ್, ಮನೆ ಖರೀದಿಗೆ ಬೇಕಾಗಿದೆ.
ಕಿರಣ್ ಬೂಸ್ನೂರ್
98440 63409
97315 63409

**ಮನೆಗಳು ಮಾರಾಟಕ್ಕಿದೆ**
ಎಸ್.ಎಸ್. ಹೈಟೆಕ್ ಆಸ್ಪತ್ರೆ ಹಿಂಭಾಗ ಸಿದ್ದಗಂಗಾ ಬಡಾವಣೆ, ಎಸ್.ಒ.ಜಿ ಕಾಲೋನಿ ರಸ್ತೆ 30x40 ಮನೆ ಉತ್ತರ ಮುಖದ (ಗ್ರೌಂಡ್ ಫ್ಲೋರ್) ವ್ಯಾಪಾರಕ್ಕೆ ಇದೆ.
95350 12779

**ಮನೆ ಲೀಸ್‌ಗೆ ಇದೆ**
ವಿನಾಯಕ ನಗರ, 5ನೇ ಮೇನ್, 1ನೇ ಕ್ರಾಸ್, ಆಂಜನೇಯ ದೇವಸ್ಥಾನದ ಹತ್ತಿರ, ಮೊದಲನೇ ಮತ್ತು ಎರಡನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಲೀಜ್‌ಗೆ ಇದೆ. ಸಂಪರ್ಕಿಸಿ :
99012 36631

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
40x50 North, 30x50 North, 30x50 west, 30x50 East, 30x40 South, 30x40 North, 40x60 North, 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಡಿಟಿಪಿ ಆಪರೇಟರ್ ಹಾಗೂ ಆನ್ ಲೈನ್ ಅಪ್ಲಿಕೇಶನ್ ಹಾಕಲು ಅನುಭವವಿರುವವರು ಬೇಕಾಗಿದ್ದಾರೆ.
ಸಂಪರ್ಕಿಸಿ: ಚಂದನಾ ಜೆರಾಕ್ಸ್ ಸೆಂಟರ್
4ನೇ ಮೇನ್, ಎಸ್ ಬಿ ಐ ಎಟಿಎಂ ಎದುರು, ರಾಂ & ಕೋ ಸರ್ಕಲ್, ಪಿ.ಜೆ.ಬಡಾವಣೆ, ದಾವಣಗೆರೆ.
ಮೊ: 98443 54514, 86608 86694

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
ಶ್ರೀಮಾತಾ ವಿದ್ಯಾಸಂಸ್ಥೆ (ರಿ.)
ನಂದಗೋಕುಲ ಆಂಗ್ಲಮಾಧ್ಯಮ ನರ್ಸರಿ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ,
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಹೊಸ ಆರ್‌ಟಿಓ ಆಫೀಸ್ ಹಿಂಭಾಗ, ದಾವಣಗೆರೆ-6.
ಮೇಲ್ಕಂಡ ಶಾಲೆಗೆ ಶಿಕ್ಷಕ/ಕಿಯರು ಬೇಕಾಗಿದ್ದಾರೆ.
B.Sc. B.Ed., B.A., B.Sc., B.Com ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳು ದಿ. 26.7.2021ರ ಒಳಗಾಗಿ ಕಚೇರಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಮೊ. : 99640 17729 (ಕಾರ್ಯದರ್ಶಿ)

**SSLC / PUC / Degree ಪಾಸ್/ಫೇಲ್ ಮುಂದೇನು?**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್-2ವರ್ಷ. ಕೇವಲ 6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಗಂಗೋತ್ರಿ ಕಮ್ಯುನಿಟಿ ಕಾಲೇಜ್ (ರಿ)
ಬಂಧನ್ ಬ್ಯಾಂಕ್ ಹತ್ತಿರ, ಲಾಯರ್ ರೋಡ್, ದಾವಣಗೆರೆ
86602 35013

**VS Paramedical college**
SSLC ಪಾಸ್/PUC- ಪಾಸ್ or ಫೇಲ್ ಆಗಿದ್ದೀರಾ ಚಿಂತಿಸಬೇಡಿ'course (DIPLOMA HEALTH INSPECTOR (DHI) ಕೆಲವೇ ಸೀಟುಗಳು ಮಾತ್ರ. SBI ATM ಹತ್ತಿರ, ರಾಮ್ ಅಂಡ್ ಕೋ ಸರ್ಕಲ್ ದಾವಣಗೆರೆ.
90195 80600, 85532 78258

**ಜಮೀನು ಖರೀದಿಗೆ ಬೇಕಾಗಿದೆ**
(ನೀರಾವರಿ, ಬೆದ್ದಲು, ಅಡಿಕೆ, ತೆಂಗಿನ ತೋಟ)
ಕಿರಣ್ ಬೂಸ್ನೂರ್
98440 63409, 97315 63409
(ಜಮೀನು ಕೊಳ್ಳುವುದಕ್ಕೆ ವಿಚಾರಿಸಿ)

**ಬೇಕಾಗಿದ್ದಾರೆ**
ವಸತಿ ಗೃಹಕ್ಕೆ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೇಯಗಳಲ್ಲಿ ರೂಂ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವೇತನದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ.
ಸಂಪರ್ಕಿಸಿ: 63639-54459

**COMMERCIAL SITE FOR SALE**
Site No. 8, Size 20x80 Gujari Layout (Scrap Layout), Maganahalli Main Road (Double Road) Aqsa Masjid Complex (opposite) Near JDS office Davangere.
83106 39057

**Dhanwanthari Ayurveda Clinic**
Siddaveerappa Badavane, Davanagere is looking for BAMS doctors who can consult from our clinic. For more details and opportunities call on
76760 40146

**ಸೇಲ್ಸ್ & ಮಾರ್ಕೆಟಿಂಗ್**
ಮಾರ್ಕೆಟಿಂಗ್ ಕೆಲಸ ಮಾಡಲು ಅನುಭವವುಳ್ಳ ಕೆಲಸಗಾರರು ಬೇಕಾಗಿದ್ದಾರೆ
ಸುವೀ ಇಂಡಸ್ಟ್ರೀಸ್
ಕರೂರು ಇಂಡಸ್ಟ್ರೀಸ್ ಏರಿಯಾ, ದಾವಣಗೆರೆ.
96206 38679

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಬಂಗಾರದ ಅಂಗಡಿಗೆ ಸೇಲ್ಸ್ ಮ್ಯಾನ್ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಆಕರ್ಷಕ ವೇತನ 10,000 ದಿಂದ 15,000
ಕೂಡಲೇ ಸಂಪರ್ಕಿಸಿ
88673 14814

**ಫಸಲಿಗೆ ಬಂದಿರುವ ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 18 ಕಿ.ಮೀ ದೂರದ ಹರಪನಹಳ್ಳಿ ತಾ. ಹಳ್ಳಿಕೇರಿ ಗ್ರಾಮದ ಸರ್ವೆ ನಂಬರಿನ.7.16 ಸೆಂಟ್ಸ್‌ನಲ್ಲಿ ಅಪೋಸ್ ಮಾವಿನ ತೋಟ 5 ಎಕರೆ 2.16 ಸೆಂಟ್ಸ್ ತೆಂಗು & ಅಡಿಕೆ 2 ಬೋರ್ ಡ್ರಿಪ್ ಮತ್ತು ಕಲ್ಲು ಕಂಬದ ತಂತಿ ಇರುವ ಸ್ವಂತ ತೋಟ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿರಿ
98809 33630

**WANTED**
1) Lab Technician DMLT Passed.
2) X-ray Technician with or without experience can apply.
Contact : 98440-65638

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗು ತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. - ಜಾಹೀರಾತು ವ್ಯವಸ್ಥಾಪಕರು


# ಯಡಿಯೂರಪ್ಪ ವಿದಾಯ

**(1ನೇ ಪುಟದಿಂದ)** ನನ್ನ ಮೇಲಿನ ಪ್ರೀತಿ ಮತ್ತು ವಿಶ್ವಾಸದಿಂದ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಷಾ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ತಮಗೆ ಮುಖ್ಯಮಂತ್ರಿಯಾಗಲು ಅವಕಾಶ ನೀಡಿದರು.

ದುಃಖದಿಂದ ಅಧಿಕಾರ ಬಿಡುತ್ತಿಲ್ಲ, ಸಂತೋಷದಿಂದಲೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ. ಇಷ್ಟು ಸಮಯ ನನಗೆ ಅಧಿಕಾರ ನಡೆಸಲು ಅವಕಾಶ ಮಾಡಿಕೊಟ್ಟ ಪಕ್ಷದ ವರಿಷ್ಠರಿಗೆ ಆಭಾರಿಯಾಗಿದ್ದೇನೆ.

ಶಿಕಾರಿಪುರದಲ್ಲಿ 40 ರಿಂದ 50 ಜನ ಸೇರಿಸಲು ಹೆಣಗಾಡುವಂತಹ ಸಂದರ್ಭದಿಂದ ಕರ್ನಾಟಕದಲ್ಲಿ ಪಕ್ಷವನ್ನು ಕಟ್ಟಿ ಮೊದಲ ಬಾರಿಗೆ ವಿಧಾನಸಭೆಯಲ್ಲಿ ನಾನೂ ಸೇರಿದಂತೆ ಇಬ್ಬರು ಖಾತೆ ತೆರೆದೆವು ಎಂದವರು ತಿಳಿಸಿದ್ದಾರೆ.

ನಂತರ ಎರಡರಿಂದ 40 ಸ್ಥಾನಗಳು, ಆದಾದ ನಂತರ ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರದ ಹೆಬ್ಬಾಗಿಲು ತೆರೆದು ಪಕ್ಷವನ್ನು ಇಂದಿನ ಮಟ್ಟಕ್ಕೆ ತರುವಲ್ಲಿ ದುಡಿದಿದ್ದೇನೆ ಎನ್ನುವ ಮೂಲಕ ತಮ್ಮ ಶ್ರಮವನ್ನು ಪಕ್ಷದ ವರಿಷ್ಠರಿಗೆ ಮನದಟ್ಟು ಮಾಡಿದರು.

ಅಂದಿನ ನಾಯಕರಾದ ಅಟಲ್ ಬಿಹಾರಿ ವಾಜಪೇಯಿ, ಲಾಲ್ ಕೃಷ್ಣ ಅಡ್ವಾಣಿಯಂತಹ ನಾಯಕರು ರಾಜ್ಯದಲ್ಲಿ ಪ್ರವಾಸ ಕೈಗೊಂಡಾಗ 300 ರಿಂದ 400 ಜನ ಸೇರುತ್ತಿರಲಿಲ್ಲ, ಇಂತಹ ಸಂದರ್ಭದಲ್ಲಿ ಬಸವ ಕಲ್ಯಾಣದಿಂದ ಚಾಮರಾಜನಗರದವರೆಗೂ ಕಾಲ್ನಡಿಗೆ ಮಾಡಿ ಪಕ್ಷ ಕಟ್ಟಿದೆ. ಈ ಸಂದರ್ಭದಲ್ಲಿ ಕೇಂದ್ರ ರಾಜಕಾರಣಕ್ಕೆ ಬರುವಂತೆ ವಾಜಪೇಯಿ ಮತ್ತು ಅಡ್ವಾಣಿ ಆಹ್ವಾನ ನೀಡಿದ್ದರು. ಆದರೆ, ನಾನು ಇದನ್ನು ನಿರಾಕರಿಸಿ, ಕರ್ನಾಟಕದಲ್ಲೇ ಪಕ್ಷವನ್ನು ಸಂಘಟಿಸಿದೆ ಎನ್ನುತ್ತಿದ್ದಂತೆ ಭಾವುಕರಾಗಿ ಎರಡೂ ಕಣ್ಣಂಚಿನಲ್ಲೂ ನೀರು ತಂದುಕೊಂಡರು.

ಒಂದು ಕಡೆ ಕರ್ನಾಟಕದಲ್ಲಿ ಬಿಜೆಪಿ ಸಂಘಟನೆ ಮಾಡಿದ್ದೇ ನಾನು ಎಂದು ಸಮರ್ಥಿಸಿಕೊಂಡಿದ್ದಲ್ಲದೆ, ಈಗ ತಮಗಾಗುತ್ತಿರುವ ಅಪಮಾನವನ್ನು ತೋರ್ಪಡಿಸಿಕೊಳ್ಳದೆ, ಪರೋಕ್ಷವಾಗಿ ಕೆಲವು ನಾಯಕರಿಗೆ ಏನು ಹೇಳಬೇಕೋ ಅದನ್ನು ಹೇಳಿದರು.

ಈ ಬಾರಿ ಮುಖ್ಯಮಂತ್ರಿ ಆದಾಗಿನಿಂದ ಅಗ್ನಿ ಪರೀಕ್ಷೆಗಳನ್ನು ಎದುರಿಸಿದ್ದೇನೆ, ಅಧಿಕಾರ ವಹಿಸಿಕೊಳುತ್ತಿದ್ದಂತೆ ರಾಜ್ಯದಲ್ಲಿ ಎಂದೂ ಕಂಡರಿಯದ ಪ್ರವಾಹ, ಅಂದು ವರಿಷ್ಠರು ಎರಡು ತಿಂಗಳ ಕಾಲ ಮಂತ್ರಿಮಂಡಲ ರಚನೆಗೂ ಅವಕಾಶ ನೀಡಿರಲಿಲ್ಲ ಎಂದು ಕಿಡಿಕಾರಿದರು.

ನೆರೆ ನಿಭಾಯಿಸುವಷ್ಟರಲ್ಲಿ ಕೊರೊನಾ ಸಾಂಕ್ರಾಮಿಕ ರೋಗ ವಕ್ಕರಿಸಿತು, ನನ್ನ ಸಹೋದ್ಯೋಗಿಗಳು ಮತ್ತು ಅಧಿಕಾರಿಗಳೊಂದಿಗೆ ಇದನ್ನು ಸಮರ್ಥವಾಗಿ ನಿಭಾಯಿಸಿದೆವು, ಇದಕ್ಕೆ ಪ್ರಧಾನಿ ಅವರೂ ಮೆಚ್ಚುಗೆ ವ್ಯಕ್ತಪಡಿಸಿದರು. ಕೋವಿಡ್‌ನಿಂದ ಎಲ್ಲ ಆರ್ಥಿಕ ಚಟುವಟಿಕೆಯೂ ಬಂದ್ ಆಗಿ ಬೊಕ್ಕಸಕ್ಕೆ ಆದಾಯವೇ ಇಲ್ಲದಂತಾಯಿತು. ಇಂತಹ ಸಂದರ್ಭದಲ್ಲೂ ಸಂಪನ್ಮೂಲ ಕ್ರೋಢೀಕರಿಸಿ ಅಭಿವೃದ್ಧಿ ಕಾರ್ಯ ಕೈಗೊಂಡ ತೃಪ್ತಿ ನನಗಿದೆ, ಇದಕ್ಕೆ ಸಹಕರಿಸಿದ ಸಚಿವರೂ, ಶಾಸಕರೂ ಮತ್ತು ಅಧಿಕಾರಿಗಳಿಗೆ ನಾನು ಕೃತಜ್ಞನಾಗಿದ್ದೇನೆ ಎಂದು ಹೇಳಿ ಮಾತು ಮುಗಿಸಿದರು.

ರಾಜ್ಯ ಸರ್ಕಾರದ ಎಲ್ಲಾ ಹಿರಿಯ ಅಧಿಕಾರಿ ಗಳು ಸಮಾರಂಭದಲ್ಲಿ ಹಾಜರಿದ್ದರು, ಈ ವೇದಿಕೆ ಯನ್ನು ಬಳಸಿಕೊಂಡ ಯಡಿಯೂರಪ್ಪ, ಅಧಿಕಾರ ದಿಂದ ಕೆಳಗಿಳಿಯುವ ಘೋಷಣೆ ಮಾಡಿದರು.

## ಮತ್ತೆ ಅಧಿಕಾರಕ್ಕೆ ತರುವೆ

**(1ನೇ ಪುಟದಿಂದ)** ಸಹಕಾರಿಯಾಗಿ ದುಡಿಯುತ್ತೇನೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಬಹುಮತ ಬರಲಿಲ್ಲ, ಆದರೆ, ದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರುವಲ್ಲಿ ಶ್ರಮಿಸಿದ ಎಂದವರು ಹೇಳಿದ್ದಾರೆ.

## ಮುಗಿಯಿತೆಂದು ಹೋದರು

**(1ನೇ ಪುಟದಿಂದ)** ದಲಿತ ಪರ ಹೋರಾಟ ನಡೆಸಿ ಈ ಮಟ್ಟಕ್ಕೆ ಬರಲು ರಾಜ್ಯದ ಜನತೆ ಕಾರಣರಾದರು ಎಂದು ತಮ್ಮ ಹಿಂದಿನ ನೆನಪಿನ ಬುತ್ತಿಯನ್ನು ಬಿಚ್ಚಿಟ್ಟರು.

## ರಾಜಕೀಯ ನಿವೃತ್ತಿ ಇಲ್ಲ

**(1ನೇ ಪುಟದಿಂದ)** ಇಂದು ಸ್ಥಾನ ತ್ಯಜಿಸಿದ್ದೇನೆ. ಅಧಿಕಾರದಿಂದ ಕೆಳಗಿಳಿಯುವಂತೆ ನನ್ನ ಮೇಲೆ ಪಕ್ಷದ ವರಿಷ್ಠರಿಂದ ಒತ್ತಡ ಬರಲಿಲ್ಲ, ಆದರೆ, ಪಕ್ಷದ ಸಿದ್ಧಾಂತಕ್ಕೆ ಒಳಪಟ್ಟು ಈ ತೀರ್ಮಾನಕ್ಕೆ ಬರಲಾಯಿತು. ಬೇರೆಯವರಿಗೆ ಅವಕಾಶ ಮಾಡಿಕೊಡಬೇಕೆನ್ನುವ ಉದ್ದೇಶದಿಂದ ರಾಜೀನಾಮೆ ನೀಡಿದ್ದೇನೆ, ವರಿಷ್ಠರು ಯಾರನ್ನೇ ಮುಖ್ಯಮಂತ್ರಿ ಮಾಡಿದರೂ ನಾನು ಸ್ವಾಗತಿಸುತ್ತೇನೆ ಎಂದರು.

ರಾಜ್ಯಪಾಲರಾಗಿ ನೇಮಕಗೊಳ್ಳುವ ಸಾಧ್ಯತೆ ಇದೆಯೇ? ಎಂಬ ಪ್ರಶ್ನೆಗೆ ನಾನು ಸಕ್ರಿಯ ರಾಜಕಾರಣದಲ್ಲಿ ಇರಲು ಬಯಸುತ್ತೇನೆ, ಆದರೆ, ಇನ್ನು ಮುಂದೆ ಯಾವುದೇ ಆಡಳಿತಾಧಿಕಾರ ವಹಿಸಿಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.

## ರಾಹುಲ್ ಟ್ರ್ಯಾಕ್ಟರ್ ಪ್ರತಿಭಟನೆ

**(1ನೇ ಪುಟದಿಂದ)** ರೂಪಿಸಲಾ ಗಿದೆ. ಯಾರಿಗಾಗಿ ಈ ಕಾಯ್ದೆಗ ಳನ್ನು ಜಾರಿಗೆ ತರಲಾಗಿದೆ ಎಂ ಬುದು ಇಡೀ ದೇಶಕ್ಕೆ ತಿಳಿದಿದೆ. ಈ ಕಾಯ್ದೆಗಳಿಂದ ರೈತರಿಗೆ ಲಾಭವಿಲ್ಲ, ಇವುಗಳನ್ನು ವಾಪಸ್ ಪಡೆಯಲು ರಾಹುಲ್ ಒತ್ತಾಯಿಸಿದ್ದಾರೆ.

## ರಾಜೀನಾಮೆ ಮುನ್ನ ಭತ್ಯೆ ಹೆಚ್ಚಳ

**(1ನೇ ಪುಟದಿಂದ)** ಮಾಡಿದ್ದಾರೆ. ನೌಕರರ ಪ್ರಸ್ತುತ ತುಟ್ಟಿ ಭತ್ಯೆ ಶೇಕಡ 11.25 ಇದ್ದು, ಅದನ್ನು ಶೇಕಡ 21.50ಗೆ ಪರಿಷ್ಕರಿಸಲಾಗಿದೆ. ಕಳೆದ ಜುಲೈ 1ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಆದೇಶಿಸಿದ್ದಾರೆ.

# ಮುಂದಿನ ನಾಯಕರ ಸವಾಲು

**(1ನೇ ಪುಟದಿಂದ)** ಬಿಜೆಪಿ ವರಿಷ್ಠರು ಹಾಗೂ ಆರ್‌ಎಸ್‌ಎಸ್ ಮುಖಂಡರು ಭಾರೀ ಕಸರತ್ತು ನಡೆಸಿದ್ದಾರೆ.

ಯುವ ಸಮುದಾಯಕ್ಕೆ ಸೇರಿದ ನಾಯಕರೊಬ್ಬರಿಗೆ ಈ ಪಟ್ಟ ಕಟ್ಟಿ ಪ್ರಯೋಗ ನಡೆಸಲು ವರಿಷ್ಠರು ಚಿಂತನೆ ನಡೆಸಿದ್ದಾರೆ. ಇದಕ್ಕಾಗಿ ಸಂಘದಿಂದ ಬೆಳೆದಿರುವ ನಾಲ್ಕಾರು ಹೆಸರುಗಳು ಚರ್ಚೆಗೆ ಬಂದಿವೆ, ಅದರಲ್ಲಿ ಪ್ರಮುಖವಾಗಿ, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಹಾಗೂ ಶಾಸಕ ಸಿ.ಟಿ. ರವಿ, ಕಾರ್ಕಳ ವಿಧಾನಸಭಾ ಕ್ಷೇತ್ರದ ಸುನೀಲ್ ಕುಮಾರ್, ವಿಧಾಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಉಪಮುಖ್ಯಮಂತ್ರಿ ಡಾ. ಅಶ್ವತ್ಥನಾರಾಯಣ. ಇವರಲ್ಲಿ ರವಿ ಮತ್ತು ಅಶ್ವತ್ಥನಾರಾಯಣ ಒಕ್ಕಲಿಗ ಸಮುದಾಯಕ್ಕೆ ಸೇರಿದವರು, ವಿಶ್ವೇಶ್ವರ ಹೆಗಡೆ ಕಾಗೇರಿ ಬ್ರಾಹ್ಮಣ ಸಮುದಾಯದವರು, ಸುನೀಲ್ ಕುಮಾರ್ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆ.

ಯಡಿಯೂರಪ್ಪ ಅವರಿಂದ ತೆರವಾದ ಸ್ಥಾನಕ್ಕೆ ಅದೇ ಸಮುದಾಯದವರನ್ನೇ ತರುವುದಾದರೆ, ಮೊದಲ ಆದ್ಯತೆ ಬಸನಗೌಡ ಪಾಟೀಲ್ ಯತ್ನಾಳ್ ಮತ್ತು ಇತರರ ಹೆಸರು ಪ್ರಸ್ತಾಪಗೊಂಡಿವೆ. ಅಲ್ಲದೆ, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರೂ ಚರ್ಚೆಯಲ್ಲಿದ್ದಾರೆ.

ಎಲ್ಲರಿಗೂ ಆಶ್ಚರ್ಯ ಎನ್ನುವಂತೆ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರಿಗೇ ಕರ್ನಾಟಕದ ನಾಯಕತ್ವ ಏಕೆ ಕೊಡಬಾರದು ಎಂಬ ಮಾತೂ ಕೇಳಿಬರುತ್ತಿದೆ. ಸಂತೋಷ್ ಮುಖ್ಯಮಂತ್ರಿಯಾದರೆ, ಸಂಘದ ಅಜೆಂಡಾಗಳನ್ನು ಗಟ್ಟಿ ಮಾಡುವ ಜೊತೆಗೆ ಎಲ್ಲರನ್ನೂ ನಿಭಾಯಿಸಿಕೊಂಡು ಹೋಗುತ್ತಾರೆ, ಮಿಗಿಲಾಗಿ ಯಡಿಯೂರಪ್ಪ ಅವರನ್ನೂ ಜೊತೆಯಲ್ಲಿ ಕೊಂಡೊಯ್ಯುವ ಶಕ್ತಿ ಅವರಲ್ಲಿದೆ.

ಸಂತೋಷ್ ಅವರಿಗೂ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ನಂತರ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾಗಿ ಬಡ್ತಿ ಪಡೆದು ರಾಷ್ಟ್ರಮಟ್ಟದಲ್ಲಿ ಪಕ್ಷದಲ್ಲಿ ಮೂರನೇ ಸ್ಥಾನದಲ್ಲಿ ಕುಳಿತಿದ್ದಾರೆ. ಈ ಸ್ಥಾನದಲ್ಲಿದ್ದರೂ ರಾಜ್ಯದ ಮುಖ್ಯಮಂತ್ರಿ ಆಗಬೇಕೆಂಬ ಕನಸು ಅವರಿಗಿದೆ, ತಮಗೆ ಆ ಸ್ಥಾನ ದೊರೆಯದಿದ್ದರೆ ತಮ್ಮ ಬೆಂಬಲಿಗರಿಗೆ ಈ ಸ್ಥಾನದಲ್ಲಿ ಕೂರಿಸುವಲ್ಲಿ ಯಶಸ್ವಿಯಾಗಬಹುದು.

ಕರಾವಳಿ, ಮಲೆನಾಡಿನಲ್ಲಿ ಪಕ್ಷ ಸಂಘಟನೆಯಿಂದ ಬಲಗೊಂಡಿದ್ದರೆ, ಉಳಿದಂತೆ ಮಧ್ಯ ಕರ್ನಾಟಕ, ಮುಂಬೈ ಹಾಗೂ ಹೈದರಾಬಾದ್ ಕರ್ನಾಟಕದಲ್ಲಿನ ಯಡಿಯೂರಪ್ಪ ಶಕ್ತಿಯೇ ಪಕ್ಷ ನಾಲ್ಕು ಬಾರಿ ಅಧಿಕಾರ ಹಿಡಿಯಲು ಕಾರಣವಾಗಿದೆ. ಮುಂದಿನ ಚುನಾವಣೆಗೆ ಹೊಸ ಪ್ರಯೋಗ ಮಾಡಿದರೂ ಯಡಿಯೂರಪ್ಪ ಅವರನ್ನು ಬದಿಗಿರಿಸಿ, ಕರ್ನಾಟಕದ ಮಟ್ಟಿಗಷ್ಟೇ ರಾಜಕೀಯ ಮಾಡಿದರೆ ಸದ್ಯಕ್ಕೆ ಅದು ಯಶಸ್ವಿಯಾಗದು.

ಯಡಿಯೂರಪ್ಪ ಅವರನ್ನು ಜೊತೆಯಲ್ಲಿಟ್ಟುಕೊಂಡೇ ಸರ್ಕಾರ ರಚನೆ ಮಾಡಿ ಪಕ್ಷ ಸಂಘಟಿಸಿದರೆ ಮುಂದಿನ ವಿಧಾನಸಭೆಯಲ್ಲಿ ಹೋರಾಟ ನಡೆಸಬಹುದು. ಇದು ಪಕ್ಷದ ವರಿಷ್ಠರಿಗೂ ತಿಳಿದಿದೆ, ಅವರು ಯಡಿಯೂರಪ್ಪ ಅವರಿಗೆ ನೀಡಿರುವ ಮುಂದಿನ ಸಂದೇಶಗಳಿಂದಲೇ ಇಂದು ಅವರು ಅಧಿಕಾರದಿಂದ ಕೆಳಗಿಳಿಯುವ ಸಂದರ್ಭದಲ್ಲೂ ದೆಹಲಿ ನಾಯಕರನ್ನು ಹೊಗಳಿ ಕೊಂಡಾಡಿದರು.

## ನ್ಯಾಯಬೆಲೆ ಅಂಗಡಿಯಲ್ಲಿ ವಸೂಲಿ : ದೂರು

ದಾವಣಗೆರೆ, ಜು.26- ಕೆಲ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರದಾರರದಿಂದ 20 ರೂ. ಪಡೆಯಲಾಗುತ್ತಿದ್ದು, ಈ ಬಗ್ಗೆ ಜಿಲ್ಲಾಡಳಿತವು ತಕ್ಷಣವೇ ಕ್ರಮ ಕೈಗೊಳ್ಳುವಂತೆ ಕರ್ನಾಟಕ ದಲಿತಾ ಸಂಘರ್ಷ ಸಮಿತಿಯ ಪ್ರಧಾನ ಕಾರ್ಯದರ್ಶಿ ಕೆ.ರವಿ ಒತ್ತಾಯಿಸಿದ್ದಾರೆ.

## ಜಲಾಶಯದಿಂದ ನದಿಗೆ ನೀರು

**(1ನೇ ಪುಟದಿಂದ)** ಒಳಹರಿವಿನ ಪ್ರಮಾಣ ಹೆಚ್ಚಾಗುತ್ತಿದೆ. ಭದ್ರಾ ಜಲಾಶಯದ ನೀರಿನ ಗರಿಷ್ಠ ಮಟ್ಟಕ್ಕೆ ಶೀಘ್ರ ಭರ್ತಿಯಾಗುವ ಸಂಭವವಿದ್ದು, ಜಲಾಶಯದ ಸುರಕ್ಷತೆ ದೃಷ್ಟಿಯಿಂದ ಯಾವುದೇ ಸಮಯದಲ್ಲಾದರೂ, ಒಳಹರಿವಿನ ಪ್ರಮಾಣಕ್ಕೆ ಅನುಗುಣವಾಗಿ ಸ್ಪಿಲ್ ವೇ ಗೇಟ್ ಮೂಲಕ ನದಿಗೆ, ಭದ್ರಾ ಬಲದಂಡೆ, ಎಡದಂಡೆ ನಾಲೆಗಳಲ್ಲಿ ಹೆಚ್ಚುವರಿ ನೀರನ್ನು ಹರಿಯಬಿಡಲಾಗುವುದು.

ನದಿ ಪಾತ್ರಗಳಲ್ಲಿ ಸಾರ್ವಜನಿಕರು ಮತ್ತು ರೈತರು ತಿರುಗಾಡುವುದು, ದನಕರುಗಳನ್ನು ತೊಳೆಯುವುದು, ದೈನಂದಿನ ಚಟುವಟಿಕೆಗಳನ್ನು ಮಾಡುವುದನ್ನು ನಿಷೇಧಿಸಲಾಗಿದೆ ಎಂದು ಕರ್ನಾಟಕ ನೀರಾವರಿ ನಿಗಮ, ಬಿ.ಆರ್. ಪ್ರಾಜೆಕ್ಟ್‌ನ ಭದ್ರಾ ಯೋಜನಾ ವೃತ್ತದ ಅಧೀಕ್ಷಕ ಅಭಿಯಂತರರು ತಿಳಿಸಿದ್ದಾರೆ.


**ಮಹಿಳಾ ಸೇವಾ ಸಮಾಜ (ರಿ.)**
ಅಶೋಕ ರಸ್ತೆ, ದಾವಣಗೆರೆ-577 002. ಫೋನ್ : 08192-230084



**ನರ್ಸರಿ, ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ 2021-22 ನೇ ವರ್ಷಕ್ಕೆ ಪ್ರವೇಶ ಪ್ರಕಟಣೆ**





ಉಚಿತ ಶಿಕ್ಷಣ, ಪಠ್ಯಪುಸ್ತಕ, ಬಿಸಿಯೂಟ ಮತ್ತು ಹಾಲು ಇತರೆ ಸೌಲಭ್ಯ ಕಲ್ಪಿಸಿಕೊಡಲಾಗುವುದು

**ಪ್ರಾಥಮಿಕ 1ನೇ ತರಗತಿ ಹಾಗೂ ಪೌಢಶಾಲೆಯ 8ನೇ ತರಗತಿಗೆ ಉಚಿತ ಪ್ರವೇಶ ಪ್ರಕಟಣೆ. ಮೊದಲ ಬಂದವರಿಗೆ ಆದ್ಯತೆ/ಕೇವಲ ಕೆಲವೇ ದಾಖಲಾತಿಗೆ ಅವಕಾಶ ಇರುತ್ತದೆ**

2021-22ನೇ ಶೈಕ್ಷಣಿಕ ವರ್ಷಕ್ಕೆ LKG, UKG, ಪ್ರಾಥಮಿಕ ಹಾಗೂ ಪೌಢಶಾಲೆಗಳಿಗೆ ಪ್ರವೇಶ ಪ್ರಾರಂಭವಾಗಿರುತ್ತದೆ. ಉಚಿತ ಶಿಕ್ಷಣ, ಉಚಿತ ಪಠ್ಯಪುಸ್ತಕ, ವಿದ್ಯಾರ್ಥಿ ವೇತನ ಇನ್ನೂ ಹಲವಾರು ಸೌಲಭ್ಯಗಳಿರುತ್ತವೆ.

**ಶಾಲೆಯ ವೈಶಿಷ್ಟ್ಯತೆ:** ದಾವಣಗೆರೆ ಹೃದಯ ಭಾಗದಲ್ಲಿದ್ದು, ಶ್ರೀ ಜಯದೇವ ಸರ್ಕಲ್, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ನಗರ ಸಾರಿಗೆ ಬಸ್ ನಿಲುಗಡೆಯೂ ಹತ್ತಿರವಾಗಿದ್ದು, ಗ್ರಾಮೀಣ ವಿದ್ಯಾರ್ಥಿಗಳಿಗೆ ನಗರದ ಹೊರ ಭಾಗದಿಂದ ಬರುವ ವಿದ್ಯಾರ್ಥಿಗಳಿಗೂ ಅನುಕೂಲವಾಗಿರುತ್ತದೆ , ♦ ಗ್ರಂಥಾಲಯ ವ್ಯವಸ್ಥೆ ♦ ಬಿಸಿ ಊಟದ ಯೋಜನೆ ♦ ಕ್ಷೀರ ಭಾಗ್ಯದ ಯೋಜನೆ ♦ ವಿಶೇಷ ತರಗತಿಗಳ ವ್ಯವಸ್ಥೆ ♦ C.C.E ಆಧಾರಿತ ಪರೀಕ್ಷೆ ♦ ಸಾಂಸ್ಕೃತಿಕ ಹಾಗೂ ಕ್ರೀಡಾ ಪ್ರೋತ್ಸಾಹ.

**ಪ್ರವೇಶ ಅರ್ಜಿಗಳನ್ನು ಬೆಳಿಗ್ಗೆ 10.30 ರಿಂದ 2.00ರವರೆಗೆ ವಿತರಿಸಲಾಗುವುದು.**

ಶ್ರೀಮತಿ ಕೆ.ಕೆ. ಸುಶೀಲಮ್ಮ, ಅಧ್ಯಕ್ಷರು — ಶ್ರೀಮತಿ ಜಯ್ಯಮ್ಮ ನೀಲಗುಂದ, ಕಾರ್ಯದರ್ಶಿ

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಕಲಿಯಿರಿ**
BASIC-300/-
DTP-450
Door Coaching also
Mob : 74062 78270

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಬೇಕಾಗಿದ್ದಾರೆ**
ಸಿವಿಲ್ ಇಂಜಿನಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಪಿಯುಸಿ ಆದ ಹುಡುಗರು ಬೇಕಾಗಿರುತ್ತಾರೆ.
ಹರ್ಷ ಇಂಜಿನಿಯರ್ಸ್
ಚೇತನ ಹೋಟೆಲ್ ರಸ್ತೆ, ದಾವಣಗೆರೆ
79752 35107


### ಬಿ.ತಿಪ್ಪೇರುದ್ರಾಚಾರ್ ನಿಧನ



ದಾವಣಗೆರೆಯ ಕೆ.ಬಿ.ಬಡಾವಣೆ 4ನೇ ಕ್ರಾಸ್ ನಿವಾಸಿ ಬಿ.ತಿಪ್ಪೇರುದ್ರಾಚಾರ್ ಇವರು ಸೋಮವಾರ ಸಂಜೆ 6.30ಕ್ಕೆ ತಮ್ಮ ಸ್ವಗೃಹದಲ್ಲಿ ನಿಧನರಾಗಿರುತ್ತಾರೆ. ಅವರಿಗೆ 76 ವರ್ಷ ವಯಸ್ಸಾಗಿದ್ದು, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಜು. 27ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ನಗರದ ಪಿ.ಬಿ. ರಸ್ತೆಯ ವೈಕುಂಠ ಧಾಮದಲ್ಲಿ ನೆರವೇರಲಿದೆ.

### ಆವರಗೊಳ್ಳದ ಮಡಿವಾಳರ ಈರಣ್ಣ ನಿಧನ



ದಾವಣಗೆರೆ ತಾಲ್ಲೂಕು ಆವರಗೊಳ್ಳ ಗ್ರಾಮದ ವಾಸಿ ಮಡಿವಾಳರ ಈರಣ್ಣ (56) ಅವರು ದಿನಾಂಕ 26.07.2021ರ ಮಂಗಳವಾರ ಸಂಜೆ 4 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ ಮೊಮ್ಮಕ್ಕಳು ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.07.2021ರ ಮಂಗಳವಾರ ಬೆಳಿಗ್ಗೆ 11.30ಕ್ಕೆ ಆವರಗೊಳ್ಳ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

### ಸರ್ವಮಂಗಳಮ್ಮ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ 8ನೇ ಮೇನ್, 14ನೇ ಕ್ರಾಸ್ ವಾಸಿ ದಿ|| ಚೆನ್ನಪ್ಪ ಕೊಂಡಜ್ಜಿ ಇವರ ಧರ್ಮಪತ್ನಿ ಸರ್ವಮಂಗಳಮ್ಮ (93) ಇವರು ದಿನಾಂಕ 26.07.2021ರ ಸೋಮವಾರ ರಾತ್ರಿ 8.30ಕ್ಕೆ ನಿಧನರಾದರು. ಐವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.07.2021ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

## ನಾಳೆ ಬಾಳೆಕಾಯಿ ಹುಡಿ ತಯಾರಿಕೆ ಬಗ್ಗೆ ವೆಬಿನಾರ್

ದಾವಣಗೆರೆ, ಜು.26 - ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ಅಡಿಕೆ ಪತ್ರಿಕೆ ಇವರ ಸಹಯೋಗದಲ್ಲಿ ನಾಡಿದ್ದು ದಿನಾಂಕ 28ರ ಬೆಳಗ್ಗೆ 11ಕ್ಕೆ ಮನೆಯಲ್ಲೇ ಬಾಳೆಕಾಯಿ ಹುಡಿ ತಯಾರಿಕೆಯ (ಬಾಕಾಹು) ಬಗ್ಗೆ ತಜ್ಞರಿಂದ ಮಾಹಿತಿ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದಲ್ಲಿ ತಜ್ಞರಾದ ಡಾ. ಟಿ.ಎನ್. ದೇವರಾಜ್, ಹೆಚ್.ಎಂ. ಸಣ್ಣಗೌಡ್ರ, ಎಂ.ಜಿ.ಬಸವನಗೌಡ, ಅಡಿಕೆ ಪತ್ರಿಕೆ ಸಂಪಾದಕ ಶ್ರೀ ಪಡ್ರೆ ಭಾಗವಹಿಸಲಿದ್ದಾರೆ.


**ನರ್ಸರಿ ವಿಭಾಗಕ್ಕೆ ಶಿಕ್ಷಕಿಯರು ಬೇಕಾಗಿದ್ದಾರೆ**
ದಾವಣಗೆರೆ ಪ್ರತಿಷ್ಠಿತ ಶಾಲೆಗೆ ನರ್ಸರಿ ವಿಭಾಗಕ್ಕೆ ಶಿಕ್ಷಕಿಯರು ಬೇಕಾಗಿದ್ದಾರೆ.
✦ ಆಕರ್ಷಕ ವೇತನ,
✦ EPF ಮತ್ತು ESI ಸೌಲಭ್ಯ,
✦ English Fluency,
✦ PUC (Science), D.Ed. ವಿದ್ಯಾರ್ಹತೆಯೊಂದಿಗೆ ಸಂಪರ್ಕಿಸಿ :
77604 99155


### 15 ನೇ ವರ್ಷದ ಪುಣ್ಯಸ್ಮರಣೆ




**ವಿಶ್ವಾನಂದ ಆರ್. ಮಾಗಾನಹಳ್ಳಿ**
ಜನನ : 01.01.1947, ಮರಣ : 27.07.2006

ವಾತ್ಸಲ್ಯ ಮೂರ್ತಿಗಳು, ವಿಶಾಲ ಹೃದಯಿಗಳಾದ ನೀವು ನಮ್ಮನ್ನು ಅಗಲಿ (27.07.2021ಕ್ಕೆ) 15 ವರ್ಷಗಳು ಕಳೆದವು. ನಿಮ್ಮ ಆಶೀರ್ವಾದವೇ ನಮಗೆ ಸ್ಫೂರ್ತಿ, ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿ ಉಳಿದಿದೆ.

ದುಃಖತಪ್ತರಾದ :
ಪತ್ನಿ : ಹೇಮಾ ವಿಶ್ವಾನಂದ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಸಹೋದರರು, ಸಹೋದರಿ
**ಆನಂದ ಬುಕ್ ಡಿಪೋ, ಸುಭಾಷ್ ರಸ್ತೆ, ದಾವಣಗೆರೆ.**

### 16ನೇ ವರ್ಷದ ಪುಣ್ಯಸ್ಮರಣೆ



**ಲಿಂ|| ವೇ|| ಶ್ರೀ ಹೆಚ್.ಎಂ. ಸೋಮನಾಥಯ್ಯನವರು**

ನಿಮ್ಮ ಆದರ್ಶಗಳೇ ನಮಗೆ ದಾರಿ ದೀಪ, ನೀವು ತೋರಿದ ಮಾರ್ಗದಲ್ಲಿ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲೇ ಇರುವ

ಶ್ರೀಮತಿ ಹೆಚ್.ಎಂ. ಸರೋಜ ಸೋಮನಾಥಯ್ಯ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಹಿರೇಮಠದ ಬಂಧು-ಮಿತ್ರರು, ಭಕ್ತ ವೃಂದ.

ಸಿಬ್ಬಂದಿ ವರ್ಗ : ಮೆ|| ದೇವನಗರಿ ಗ್ಯಾಸ್ ಏಜೆನ್ಸಿ
ದೇವನಗರಿ ಎಜುಕೇಷನಲ್ ಟ್ರಸ್ಟ್ (ರಿ.) | ಹೆಚ್.ಎಂ.ಎಸ್. ಕಾನ್ವೆಂಟ್, ಹಿರೇಮಠ, ಕಾಯಿಪೇಟೆ, ದಾವಣಗೆರೆ.

# ನಿರಾಶ್ರಿತರಿಗೆ ಆತ್ಮಸ್ಥೈರ್ಯ ತುಂಬಿದ ಹರಿಹರದ ನ್ಯಾಯಾಧೀಶರು



ಹರಿಹರ, ಜು. 26- ಆತ್ಮ ಸ್ಥೈರ್ಯ ಕಳೆದುಕೊಳ್ಳದೆ ಯೋಗಕ್ಷೇಮದಿಂದ ಇರುವಂತೆ ಇಲ್ಲಿನ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಯಶವಂತ್ ಅವರು ಗಂಗಾನಗರದ ನಿವಾಸಿಗಳಿಗೆ ಹೇಳಿದರು.

ಗಂಗಾನಗರ ಬಡಾವಣೆಗೆ ಮತ್ತು ಎಪಿಎಂಸಿ ಆವರಣದಲ್ಲಿರುವ ನಿರಾಶ್ರಿತರ ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿದ ಅವರು, ನಿವಾಸಿಗಳ ಯೋಗಕ್ಷೇಮ ವಿಚಾರಿಸಿದರು.

ಮಾನವ ಹಕ್ಕುಗಳಿಗೆ ಚ್ಯುತಿ ಬಂದರೆ ಅಥವಾ ಮನೆಗಳಿಗೆ ನೀರು ನುಗ್ಗಿ ತೊಂದರೆಯಾಗಿರುವ ವಿಚಾರವನ್ನು ಹೈಕೋರ್ಟ್ ಗಮನಕ್ಕೆ ತಂದು ಶಾಶ್ವತ ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಸರ್ಕಾರಕ್ಕೆ ಪತ್ರ ಬರೆಯುವ ಮೂಲಕ ನ್ಯಾಯ ಒದಗಿಸುವ ಕಾರ್ಯ ಮಾಡುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಗ್ರೇಡ್ 2 ತಹಶೀಲ್ದಾರ್ ಶಶಿಧರ್, ತಾಲ್ಲೂಕು ಆಡಳಿತದ ಹೆಚ್. ಜಿ. ಹೇಮಂತ್, ಆನಂದ್, ದೇವರಾಜ್, ಪ್ರಭುಸ್ವಾಮಿ, ನಗರಸಭೆ ವಸಂತ್, ಪ್ರಕಾಶ್, ಪೊಲೀಸ್ ಸಿಬ್ಬಂದಿ ಮಂಜುನಾಥ್, ಆರೋಗ್ಯ ಇಲಾಖೆ ವಿಮಲಾನಾಯ್ಕ್ ಇತರರು ಹಾಜರಿದ್ದರು.

## ಗಡಿ ಸಂಘರ್ಷ ಉಲ್ಬಣ; ಆರು ಪೊಲೀಸರ ಸಾವು

**(1ನೇ ಪುಟದಿಂದ)** ಕರೀಮ್‌ಗಂಜ್ ಹಾಗೂ ಹೈಲಕಾಂಡಿಗಳು ಮಿಜೋರಾಂನ ಮೂರು ಜಿಲ್ಲೆಗಳಾದ ಐಜ್ವಾಲ, ಕೊಲಾಸಿಬ್ ಹಾಗೂ ಮಮಿತ್ ಜೊತೆ 164 ಕಿ.ಮೀ. ಉದ್ದದ ಗಡಿ ಹಂಚಿಕೊಂಡಿವೆ. ಕಳೆದ ಕೆಲ ವಾರಗಳಲ್ಲಿ ಗಡಿ ಒತ್ತುವರಿ ಬಗ್ಗೆ ಉಭಯ ರಾಜ್ಯಗಳಿಂದ ಆರೋಪಗಳು ಕೇಳಿ ಬಂದಿದ್ದವು. ಕೆಲವೆಡೆ ಸಂಘರ್ಷಗಳೂ ಕಂಡು ಬಂದಿದ್ದವು. 2 ದಿನಗಳ ಹಿಂದಷ್ಟೇ ಈಶಾನ್ಯದ ಎಂಟು ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದ ಅಮಿತ್ ಷಾ, ಗಡಿ ವಿವಾದಗಳನ್ನು ಬಗೆಹರಿಸಿಕೊಳ್ಳುವ ಅಗತ್ಯದ ಬಗ್ಗೆ ಒತ್ತಿ ಹೇಳಿದ್ದರು.

# ಕಾಲೇಜು ಕಡೆ ವಿದ್ಯಾರ್ಥಿಗಳ ನಡೆ

**(1ನೇ ಪುಟದಿಂದ)** ಕಾಲೇಜುಗಳಿಗೆ ಆಗಮಿಸುತ್ತಿದ್ದಾರೆ. ಪ್ರವೇಶಕ್ಕಾಗಿ ಅರ್ಜಿಗಳನ್ನು ಪಡೆಯಲು ವಿದ್ಯಾರ್ಥಿಗಳು ಸಾಲುಗಟ್ಟಿ ನಿಂತಿದ್ದು ಕಂಡು ಬಂತು. ಸರ್ಕಾರದ ಮಾರ್ಗಸೂಚಿಯ ಅನ್ವಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಲಸಿಕೆಗೆ ವ್ಯವಸ್ಥೆ ಮಾಡಲಾಗಿತ್ತು. ಸ್ಯಾನಿಟೈಜೇಷನ್ ನಂತರ ಕಾಲೇಜುಗಳನ್ನು ತೆರೆಯಲಾಗಿದೆ.

ಈ ಬಗ್ಗೆ ವಿವರ ನೀಡಿರುವ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಶಂಕರ್ ಆರ್. ಶೀಲಿ, ಕಾಲೇಜಿಗೆ ಬರಲು ಲಸಿಕೆ ಪಡೆಯುವುದು ಕಡ್ಡಾಯವಾಗಿದೆ. ಕಾಲೇಜಿನಲ್ಲಿ ಪ್ರಸಕ್ತ 3,800 ವಿದ್ಯಾರ್ಥಿಗಳಿದ್ದು, ಇವರಲ್ಲಿ 3,300 ವಿದ್ಯಾರ್ಥಿಗಳು ಲಸಿಕೆ ಪಡೆದಿದ್ದಾರೆ. ಉಳಿದ ಹಲವರು ಬೇರೆ ಬೇರೆ ಊರು ಹಾಗೂ ಜಿಲ್ಲೆಯವರಾಗಿದ್ದು, ಅಲ್ಲಿ ಲಸಿಕೆ ಪಡೆದಿರುವ ಸಾಧ್ಯತೆ ಇದೆ ಎಂದಿದ್ದಾರೆ.

ಮೊದಲ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಈಗಾಗಲೇ ಟ್ಯಾಬ್ ನೀಡಲಾಗಿದೆ. ಅವರು ಆನ್‌ಲೈನ್ - ಇಲ್ಲವೇ ಆಫ್‌ಲೈನ್ ಯಾವುದರಲ್ಲಾದರೂ ಹಾಜರಾಗಲು ಸದ್ಯಕ್ಕೆ ಅನುಮತಿ ನೀಡಲಾಗಿದೆ ಎಂದರು. ಕಾಲೇಜಿಗೆ ದಾಖಲಾದ ವಾರದ ವೇಳೆಗೆ ಹಾಸ್ಟೆಲ್‌ಗೆ ಪ್ರವೇಶ ಸಿಗಲಿದೆ. ನಂತರದಲ್ಲಿ ವಿದ್ಯಾರ್ಥಿಗಳ ಹಾಜರಾತಿ ಇನ್ನಷ್ಟು ಹೆಚ್ಚಾಗಲಿದೆ ಎಂದವರು ಹೇಳಿದ್ದಾರೆ.

ಎ.ವಿ.ಕೆ. ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಪಿ. ಕುಮಾರ್ ಮಾತನಾಡಿದ್ದು, ಕಾಲೇಜಿನಲ್ಲಿ 1,604 ಪದವಿ ವಿದ್ಯಾರ್ಥಿನಿಯರಿದ್ದಾರೆ. ಅವರಲ್ಲಿ ಅರ್ಧದಷ್ಟು ವಿದ್ಯಾರ್ಥಿಗಳು ಬಂದಿದ್ದಾರೆ.

ಈ ಬಾರಿ ಆನ್‌ಲೈನ್‌ನಲ್ಲಿ ಪದವಿ ಪ್ರವೇಶಕ್ಕೆ ತಂತ್ರಾಂಶ ರೂಪಿಸಲಾಗಿದೆ. ಶುಲ್ಕ ಯಾವ ರೀತಿ ಇರಲಿದೆ ಎಂಬುದೂ ಇತ್ಯರ್ಥವಾಗಿಲ್ಲ. ಪಠ್ಯೇತರ ಚಟುವಟಿಕೆಗಳಿಗೆ ಶುಲ್ಕ ಪಡೆಯಬಹುದೇ - ಬೇಡವೇ ಎಂಬುದು ಅಸ್ಪಷ್ಟವಾಗಿದೆ. ಹೀಗಾಗಿ ಸದ್ಯಕ್ಕೆ ಪ್ರವೇಶ ಪ್ರಕ್ರಿಯೆ ನಡೆಯುತ್ತಿಲ್ಲ. ಪ್ರವೇಶದ ಅರ್ಜಿಗಳನ್ನು ಮಾತ್ರ ವಿತರಿಸುತ್ತಿದ್ದೇವೆ ಎಂದವರು ತಿಳಿಸಿದರು.

ಈ ಸಂದರ್ಭದಲ್ಲಿ ಪತ್ರಿಕೆಯೊಂದಿಗೆ ಮಾತನಾಡಿದ ಹಳೇ ಕುಂದುವಾಡದ ಪ್ರಥಮ ವರ್ಷದ ಬಿ.ಎ. ವಿದ್ಯಾರ್ಥಿ ಸೋಮಲಿಂಗಪ್ಪ, ಸರ್ಕಾರ ಟ್ಯಾಬ್ ಕೊಟ್ಟಿದ್ದರೂ ಸಹ ನೆಟ್‌ವರ್ಕ್ ಸಮಸ್ಯೆ ಎದುರಾಗಿತ್ತು. ಹೀಗಾಗಿ ಆನ್‌ಲೈನ್ ತರಗತಿ ಅಸಮರ್ಪಕವಾಗಿತ್ತು. ನೇರ ತರಗತಿಗಳು ಆರಂಭವಾಗಿದ್ದು ಸಂತೋಷ ತಂದಿದೆ ಎಂದಿದ್ದಾರೆ.

ಅಂತಿಮ ವರ್ಷದ ಬಿ.ಎ. ವಿದ್ಯಾರ್ಥಿನಿ ಕೆ.ಪಿ. ಸುಷ್ಮ ಮಾತನಾಡಿದ್ದು, ಆನ್‌ಲೈನ್‌ನಲ್ಲಿ ಕಲಿಕೆ ಮುಂದುವರೆದಿತ್ತಾದರೂ ಪಠ್ಯೇತರ ಚಟುವಟಿಕೆ ಸಾಧ್ಯವಾಗಿರಲಿಲ್ಲ. ಇನ್ನೊಂದು ತಿಂಗಳು ಮಾತ್ರ ಕಾಲೇಜು ಅವಧಿ ಇದೆ. ಇಷ್ಟರಲ್ಲಾದರೂ ಸ್ನೇಹಿತೆಯರ ಜೊತೆ ಕಾಲೇಜಿನ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವ ನಿರೀಕ್ಷೆ ಇದೆ ಎಂದಿದ್ದಾರೆ.

ಒಟ್ಟಾರೆ ಭವಿಷ್ಯದ ಹಲವು ಕನಸುಗಳನ್ನು ಹೊತ್ತ ವಿದ್ಯಾರ್ಥಿಗಳಿಗೆ ಕಾಲೇಜು ಕಲಿಕೆಯ ಮಾರ್ಗ ತೆರವಾಗಿದೆ. ಕೊರೊನಾದ ಕರಿನೆರಳಿನಿಂದ ಮುಕ್ತವಾಗಿ ಮುಂದಿನ ಕಲಿಕೆ ಸುಸೂತ್ರವಾಗಲಿ ಎಂದು ಹಾರೈಸಬೇಕಿದೆ.

### ವಿದ್ಯಾರ್ಥಿಗಳ ಹೆಚ್ಚಳ, ಮೂಲಭೂತ ಸೌಲಭ್ಯಗಳ ಕೊರತೆ

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಈಗಾಗಲೇ 3,800 ವಿದ್ಯಾರ್ಥಿಗಳಿದ್ದಾರೆ. ಈ ವರ್ಷ ಪಿ.ಯು.ಸಿ.ಯ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿರು ವುದರಿಂದ ಈ ವರ್ಷ ವಿದ್ಯಾರ್ಥಿಗಳ ಸಂಖ್ಯೆ 5 ಸಾವಿರ ದಾಟುವ ನಿರೀಕ್ಷೆ ಇದೆ ಎಂದು ಕಾಲೇಜಿನ ಪ್ರಾಂಶುಪಾಲ ಶಂಕರ್ ಆರ್. ಶೀಲಿ ಹೇಳಿದ್ದಾರೆ.

ಕಾಲೇಜಿನಲ್ಲಿ ಕೊಠಡಿಗಳು ಸೇರಿದಂತೆ ಮೂಲಭೂತ ಸೌಲಭ್ಯಗಳ ಕೊರತೆ ಇದೆ. ಪ್ರಸಕ್ತ ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ಎರಡು ಪಾಳಿಯಲ್ಲಿ ತರಗತಿಗಳು ನಡೆಯುತ್ತಿವೆ. ಹೆಚ್ಚಿನ ವಿದ್ಯಾರ್ಥಿಗಳು ಸೇರ್ಪಡೆಯಾದರೆ, ಇನ್ನೂ ಹೆಚ್ಚಿನ ಕೊಠಡಿಗಳು ಬೇಕಾಗಲಿವೆ ಎಂದವರು ತಿಳಿಸಿದ್ದಾರೆ.

ಕಾಲೇಜಿಗೆ ಬರುವ ಬಹುತೇಕ ವಿದ್ಯಾರ್ಥಿಗಳು ಬಡ ಕುಟುಂಬದವರು. ಸಾಕಷ್ಟು ಜನರು ಕೆಲಸ ಮಾಡಿ ಕೊಳ್ಳುತ್ತಲೇ ಕಲಿಕೆಯಲ್ಲಿದ್ದಾರೆ ಎಂದವರು ಹೇಳಿದ್ದಾರೆ.


**INDIAN REDCROSS SOCIETY**
DR. SHAMANUR SHIVASHANKARAPPA RED CROSS BHAVANA, NO: 302, 'A' BLOCK, DEVARAJ URS LAYOUT, DAVANGERE-577006.
✆ 9448277727, 9448155182, Email: redcrossdvg@gmail.com
**REQUIRED**
**OFFICE EXECUTIVE (MALE) - 1 No.**
Any graduate with basic computer knowledge and Tally.
Walk in interview on Wednesday 28.07.2021 at 11 p.m at the above address
General Secretary, IRCS Davangere.





**ಹುಟ್ಟುಹಬ್ಬದ ಶುಭಾಶಯಗಳು**

ಆತ್ಮೀಯರೂ ಹಾಗೂ ದಾವಣಗೆರೆ ಜಿಲ್ಲಾ ಅಧಿವಕ್ತ ಪರಿಷತ್ತಿನ ಜಿಲ್ಲಾಧ್ಯಕ್ಷರಾದ **ಶ್ರೀಯುತ ಎಲ್. ದಯಾನಂದ** ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.

- **ಹೆಚ್. ದಿವಾಕರ್,** ನಿಕಟಪೂರ್ವ ಉಪಾಧ್ಯಕ್ಷರು, ವಕೀಲರ ಸಂಘ, ದಾವಣಗೆರೆ. ಸಂಚಾಲಕರು, ಬಿಜೆಪಿ ಕಾನೂನು ಪ್ರಕೋಷ್ಠ, ದಾವಣಗೆರೆ.
- **ಎ.ಸಿ. ರಾಘುವೇಂದ್ರ,** ವಕೀಲರು, ರಾಜ್ಯ ಸಮಿತಿ ಸದಸ್ಯರು, ಬಿಜೆಪಿ ರಾಜ್ಯ ಕಾನೂನು ಪ್ರಕೋಷ್ಠ.
- **ಎ.ಎಸ್. ಮಂಜುನಾಥ,** ವಕೀಲರು ಮತ್ತು ಸಂಚಾಲಕರು, ಬಿಜೆಪಿ ದಕ್ಷಿಣ ಮಂಡಲ ದಾವಣಗೆರೆ.
- **ಕಿರಣ್ ಕುಮಾರ್ ಸುರ್ವೆ,** ಯುವ ಮುಖಂಡರು, ಬಿಜೆಪಿ ದಾವಣಗೆರೆ
- **ಜೆ.ಎಸ್. ಹೊನ್ನಪ್ಪ** ◆ **ಅಜೀರ್ ಪಠಾಣ್,** ಮಾಲೀಕರು, SSS ಎಂಟರ್‌ಪ್ರೈಸಸ್
- **ತಿರುಮಲ್ಲೇಶ್,** ಸದಸ್ಯರು, ಬಿಜೆಪಿ ಪ್ರಬುದ್ಧ ಪ್ರಕೋಷ್ಠ, ದಾವಣಗೆರೆ ಜಿಲ್ಲೆ
- **ಆಲೂರು ಪ್ರಕಾಶ್** ◆ **ಪ್ರಶಾಂತ್** ◆ **ಡಿ.ಎಸ್. ಶಿವಶಂಕರ್**

LD group and Fortune group ನ ಸದಸ್ಯರು, ದಾವಣಗೆರೆ.


## ಜಯಂತಿ ಇನ್ನಿಲ್ಲ

**(1ನೇ ಪುಟದಿಂದ)** ಸಿಲುಕಿದರು. ಜಯಂತಿ ಎಂದೇ ಹೆಸರಾಗಿ ಚಿತ್ರರಂಗದಲ್ಲಿ ಸಾಧನೆ ಮಾಡಿದರು. ಮೊದಲು ತೆಲುಗು ಹಾಗೂ ತಮಿಳಿನಲ್ಲಿ ಸಣ್ಣ ಪುಟ್ಟ ಪಾತ್ರಗಳಲ್ಲಿ ನಟಿಸಿದ್ದ ಅವರು, ವೈ.ಆರ್. ಸ್ವಾಮಿ ನಿರ್ದೇಶನದ ಜೇನುಗೂಡು ಚಿತ್ರದಲ್ಲಿ ದೊಡ್ಡ ಅವಕಾಶ ಪಡೆದರು. ಸ್ವಾಮಿ ಅವರೇ ಕಮಲಾ ಕುಮಾರಿಗೆ ಜಯಂತಿ ಎಂಬ ಹೆಸರಿಟ್ಟಿದ್ದರು. ಚಿತ್ರ ಹಿಟ್ ಆದಂತೆ, ಜಯಂತಿ ಭದ್ರ ನೆಲೆ ಕಂಡರು.

ಡಾ.ರಾಜ್‌ಕುಮಾರ್ ಜೊತೆಗೆ 'ಚಂದವಳ್ಳಿಯ ತೋಟ' ಸಿನಿಮಾದಲ್ಲಿ ನಾಯಕಿಯಾಗಿ ಜಯಂತಿ ಅಭಿನಯಿಸಿದರು. ಡಾ.ರಾಜ್ ಕುಮಾರ್ ಜೊತೆಗೆ 30ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ ಖ್ಯಾತಿ ಜಯಂತಿ ಅವರದ್ದು.

ಕಲಾವತಿ, ತುಂಬಿದ ಕೊಡ, ಬೆಟ್ಟದ ಹುಲಿ, ಮಿಸ್ ಲೀಲಾವತಿ, ಎಡಕಲ್ಲು ಗುಡ್ಡದ ಮೇಲೆ, ಧರ್ಮ ದಾರಿ ತಪ್ಪಿತು, ಮಸಣದ ಹೂ ಮುಂತಾದ ಚಿತ್ರಗಳು ಜಯಂತಿಗೆ ಜನಪ್ರಿಯತೆ ತಂದುಕೊಟ್ಟಿದ್ದವು.

ಜಯಂತಿ ಗ್ಲಾಮರ್‌ಗಾಗಿ ವಿಶೇಷವಾಗಿ ಹೆಸರು ಮಾಡಿದ್ದರು. ಯಾವುದೇ ಪಾತ್ರಕ್ಕೆ ಜೀವ ತುಂಬುತ್ತಿದ್ದ ಜಯಂತಿ, ರಾಮಾಚಾರಿ ಚಿತ್ರದ ಒನಕೆ ಓಬವ್ವನ ಹಾಡಿನಲ್ಲಿ ಒಂದೇ ಹಾಡಿನಲ್ಲಿ ಕಾಣಿಸಿಕೊಂಡರೂ ಜನರ ಮನಸ್ಸಿನಲ್ಲಿ ಉಳಿದುಕೊಳ್ಳುವಂತಹ ಛಾಪು ಮೂಡಿಸಿದ್ದರು.

ತೆಲುಗು, ತಮಿಳು, ಮಲಯಾಳಂ, ಹಿಂದಿ, ಮರಾಠಿ ಭಾಷೆಗಳಲ್ಲಿ 500 ಕ್ಕೂ ಹೆಚ್ಚು ಚಿತ್ರಗಳಲ್ಲಿ ಜಯಂತಿ ಅಭಿನಯಿಸಿದ್ದಾರೆ. ರಾಜ್ಯ ಪ್ರಶಸ್ತಿ, ಫಿಲ್ಮ್ ಫೇರ್ ಪ್ರಶಸ್ತಿ ಸೇರಿದಂತೆ ಹಲವಾರು ಗೌರವಗಳನ್ನು ಪಡೆದು ಕೊಂಡಿದ್ದಾರೆ. ಅವರ ನಿಧನದೊಂದಿಗೆ ಕನ್ನಡ ಚಿತ್ರರಂಗದ ಹಿರಿಯ ಕೊಂಡಿ ಕಳಚಿದೆ.

## ದಲಿತರನ್ನು ಸಿಎಂ ಮಾಡಲಿ

ದಾವಣಗೆರೆ, ಜು.26- ದಲಿತ ಸಮುದಾಯದ ಗೋವಿಂದ ಕಾರಜೋಳ, ನಾರಾಯಣಸ್ವಾಮಿ, ರಮೇಶ್ ಜಿಗಜಿಣಗಿ ಅವರಲ್ಲಿ ಯಾರನ್ನಾದರೂ ಮುಖ್ಯಮಂತ್ರಿಯನ್ನಾಗಿ ಮಾಡುವಂತೆ ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಸೋಲಾಪುರದ ಹನುಮಂತಪ್ಪ ಒತ್ತಾಯಿಸಿದ್ದಾರೆ.

ಬಸವ ಪರಂಪರೆಯಿಂದ ಬಂದಿರುವ ನಾಡಿನ ಮಠಾಧೀಶರುಗಳು ದಲಿತರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಿ ಎಂದು ಏಕೆ ಒತ್ತಾಯಿಸುತ್ತಿಲ್ಲ? ಎಂದು ಸೋಮಲಾಪುರ ಪ್ರಶ್ನಿಸಿದ್ದಾರೆ.

ಬಸವಣ್ಣನವರೇ ತಳ ಸಮುದಾಯದ ಮಾದಾರ ಚನ್ನಯ್ಯ ಅವರನ್ನು ಅಪ್ಪಿಕೊಂಡಿರುವಾಗ, ಅದೇ ಪರಂಪರೆಯಲ್ಲಿ ಮುಂದುವರೆಯುತ್ತಿರುವ ಈಗಿನ ಮಠಾಧೀಶರು, ದಲಿತ ಮುಖಂಡರು ಹಾಗೂ ಆರ್.ಎಸ್.ಎಸ್. ಮುಖಂಡರ ಮೇಲೆ ಒತ್ತಡ ತಂದು ದಲಿತ ಸಮುದಾಯದ ಒಬ್ಬರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಿ ಎಂದು ಮನವಿ ಮಾಡಿದ್ದಾರೆ.

## 11 ಪಾಸಿಟಿವ್, 19 ಗುಣಮುಖ

**(1ನೇ ಪುಟದಿಂದ)** ಕಳೆದೊಂದು ವಾರದ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯಲ್ಲಿ ಪಾಸಿಟಿವಿಟಿ ದರ ಶೇ.0.71ರಷ್ಟಿದ್ದು, ಮರಣ ಪ್ರಮಾಣ ದರ ಶೇ.2.04ರಷ್ಟಿರುವುದಾಗಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ರಾಘವನ್ ತಿಳಿಸಿದ್ದಾರೆ.

# ಅಶೋಕ ರಸ್ತೆ ಸಮಸ್ಯೆಗೆ ಪರಿಹಾರ



**(1ನೇ ಪುಟದಿಂದ)** ಇಷ್ಟು ದಿನಗಳ ಕಾಲ ಈ ರಸ್ತೆಯನ್ನು ಯಾರು ರಿಪೇರಿ ಮಾಡಬೇಕೆಂಬ ಸಮಸ್ಯೆ ಎದುರಾಗಿತ್ತು. ಈ ಹಿನ್ನೆಲೆಯಲ್ಲಿ ಭಾನುವಾರ ಮಹಾನಗರ ಪಾಲಿಕೆ ಎಂಜಿನಿಯರ್‌ಗಳೊಂದಿಗೆ ರಸ್ತೆ ಪರಿಶೀಲನೆ ನಡೆಸಿದ್ದೆ. ಇಂದು ಮತ್ತೊಮ್ಮೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳೊಂದಿಗೆ ಪರಿಶೀಲಿಸಿ ಚರ್ಚಿಸಲಾಗಿದೆ.

ಸದ್ಯಕ್ಕೆ ಪಿಡಬ್ಲ್ಯೂಡಿ ಇಲಾಖೆಯಿಂದ ರಸ್ತೆಯಲ್ಲಿನ ಗುಂಡಿಗಳನ್ನು ತಾತ್ಕಾಲಿಕವಾಗಿ ಮುಚ್ಚಿಸಲಾಗುವುದು. ರಸ್ತೆಯನ್ನು ಅಭಿವೃದ್ಧಿ ಪಡಿಸಲು ಸ್ಮಾರ್ಟ್ ಸಿಟಿ ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ ಎಂದರು.

ಸ್ಮಾರ್ಟ್ ಸಿಟಿ ಯೋಜನೆಯಡಿ ಈಗಾಗಲೇ ನಿರ್ಮಾಣವಾಗುತ್ತಿರುವ ಖಾಸಗಿ ಬಸ್ ನಿಲ್ದಾಣದ ಪೈಪ್ ಲೈನ್ ಕಾಮಗಾರಿಯು ಇದೇ ರಸ್ತೆ ಮೂಲಕ ನಡೆಯಬೇಕಿದ್ದು, ಆ ನಂತರವೇ ಸಿಮೆಂಟ್ ರಸ್ತೆಯ ಕಾಮಗಾರಿ ಆರಂಭವಾಗಲಿದೆ. ಪಾದಚಾರಿಗಳಿಗೆ ಅನುಕೂಲವಾಗುವಂತೆ ಫುಟ್ ಪಾತ್ ನಿರ್ಮಿಸಿ, ಬೀದಿ ದೀಪಗಳನ್ನೂ ಅಳವಡಿಸುವಂತೆ ಸ್ಮಾರ್ಟ್ ಸಿಟಿ ಅಧಿಕಾರಿಗಳಿಗೆ ತಿಳಿಸಲಾಗಿದೆ. ಒಂದು ತಿಂಗಳಲ್ಲಿ ಶಾಶ್ವತ ಪರಿಹಾರದ ಕಾಮಗಾರಿ ಆರಂಭವಾಗಲಿದೆ ಎಂದು ತಿಳಿಸಿದರು.

ಸುಮಾರು 18 ಮೀಟರ್ ಅಗಲ, 80 ಮೀಟರ್ ಉದ್ದದ ಈ ರಸ್ತೆಯಲ್ಲಿ ಸದಾ ನೀರು ನಿಂತು ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿತ್ತು. ಲೋಕೋಪಯೋಗಿ ಇಲಾಖೆಯು ತಾತ್ಕಾಲಿಕವಾಗಿ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚುವ ಕೆಲಸ ಮಾಡಲಿದೆ ಎಂದು ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಹೇಳಿದರು.

ಸ್ಮಾರ್ಟ್‌ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ನಗರ ಯೋಜನೆ ಸ್ಥಾಯಿ ಸಮಿತಿ ಅಧ್ಯಕ್ಷೆ ಉಮಾಪ್ರಕಾಶ್, ಮುಖಂಡರಾದ ಎ.ವೈ.ಪ್ರಕಾಶ್, ರಮೇಶ್, ಪಿಡಬ್ಲ್ಯೂಡಿ ಕಾರ್ಯಪಾಲಕ ಅಭಿಯಂತರ ಮಹಾದೇವ್ ಮುಂತಾದವರು ರಸ್ತೆ ಪರಿಶೀಲನೆ ವೇಳೆ ಉಪಸ್ಥಿತರಿದ್ದರು.

## ಅತ್ಯಾಚಾರ: ಆರೋಪಿಗಳ ಬಂಧನಕ್ಕೆ ಆಗ್ರಹ



ಭರಮಸಾಗರ, ಜು.26 - ಚಿತ್ರ ದುರ್ಗ ತಾಲ್ಲೂಕಿನ ವ್ಯಾಪ್ತಿಯ ಇಸಾಮುದ್ರ ಗ್ರಾಮದ ಉಪ್ಪಾರ ಸಮುದಾಯದ ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ವೆಸಗಿ ಕೊಲೆ ಮಾಡಿರುವ ಆರೋಪಿಗಳನ್ನು ಬಂಧಿಸುವಂತೆ ಉಪ್ಪಾರ ನೌಕರರ ಸಂಘದ ಅಧ್ಯಕ್ಷ ಚಂದ್ರಪ್ಪ ಒತ್ತಾಯಿಸಿದರು. ಇಸಾಮುದ್ರ ಗ್ರಾಮಕ್ಕೆ ಭೇಟಿ ನಿನ್ನೆ ನೀಡಿದ್ದ ಅವರು, ಬಾಲಕಿಯನ್ನು ಕಳೆದುಕೊಂಡ ಪೋಷಕರಿಗೆ ವೈಯಕ್ತಿಕ ಧನ ಸಹಾಯ ನೀಡಿ ಸಾಂತ್ವನ ಹೇಳಿ ಮಾತನಾಡಿದರು.

## ಜೊಲ್ಲೆ ರಾಜೀನಾಮೆಗೆ ಆಗ್ರಹಿಸಿ ಕಾಂಗ್ರೆಸ್ ಪ್ರತಿಭಟನೆ

ಗರ್ಭಿಣಿಯರು, ಬಾಣಂತಿಯರು ಮತ್ತು ಅಪೌಷ್ಟಿಕತೆಯ ಮಕ್ಕಳಿಗೆ ನೀಡುವ ಮೊಟ್ಟೆ ಖರೀದಿಯಲ್ಲಿ ಅಕ್ರಮ ಮಾಡಿರುವ ಆರೋಪಕ್ಕೊಳಗಾಗಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ ಶಶಿಕಲಾ ಜೊಲ್ಲೆ ಮತ್ತು ಶಾಸಕ ಪರಪ್ಪ ಮುನವಳ್ಳಿ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ, ಜಿಲ್ಲಾ ಮಹಿಳಾ ಕಾಂಗ್ರೆಸ್‌ನಿಂದ ಪ್ರತಿಭಟನೆ ನಡೆಯಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 11 ಕ್ಕೆ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮುಂಭಾಗದಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅನಿತಾ ಬಾಯಿ ಮಾಲತೇಶ್ ಅವರ ಅಧ್ಯಕ್ಷತೆಯಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಮಹಿಳಾ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರುಗಳಾದ ರಾಜೇಶ್ವರಿ, ಶುಭಮಂಗಳ ತಿಳಿಸಿದ್ದಾರೆ.


**ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ದಾವಣಗೆರೆ.**

**ಕಾಂ.ಓ.ಎಸ್ : 4/2020**

ವಾದಿ: **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಸ್.ಎನ್ ಬ್ರಾಂಚ್,** ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.

**ವಿರುದ್ಧ**

ಪ್ರತಿವಾದಿ: **ಎಸ್.ಜಿ. ಪ್ರವೀಣ್ ಬಿನ್ ಎಲ್. ಗಣೇಶ ರಾವ್,** 36 ವರ್ಷ, ಡೋರ್ ನಂ: 1307/2, 2ನೇ ಮೇನ್. 9ನೇ ಕ್ರಾಸ್, ವಿನೋಬನಗರ, ದಾವಣಗೆರೆ.

**ಆರ್ಡರ್ 5 ರೂಲ್ 20 (1ಎ) ಮತ್ತು ಕಲಂ 151 ಸಿ.ಪಿ.ಸಿ ಪ್ರಕಾರ ನೋಟಿಸು ಒಂದನೇ ಪ್ರತಿವಾದಿ ಎಸ್.ಜಿ.ಪ್ರವೀಣ ಬಿನ್ ಎಲ್. ಗಣೇಶ ರಾವ್ ಇವರಿಗೆ**

ಈ ಮೇಲ್ಕಂಡ ಕೇಸಿನಲ್ಲಿ ವಾದಿ ಬ್ಯಾಂಕಿನವರು ರೂ 4,34,556-00 ಗಳನ್ನು ನಿಮ್ಮಿಂದ ಬರಬೇಕಾದ ಅಸಲು ಮತ್ತು ಬಡ್ಡಿ ಸೇರಿ ವಸೂಲಾತಿಗಾಗಿ ದಾವಾ ಮಾಡಿದ್ದು, ದಿನಾಂಕ: 27.08.2021 ರಂದು ಮುದ್ದತ್ತನ್ನು ನ್ಯಾಯಾಲಯವು ನಿಗದಿಪಡಿಸಿರುತ್ತದೆ. ಆದ್ದ ರಿಂದ ತಾವು ಆ ದಿನ ಬೆಳಿಗ್ಗೆ 11.00 ಗಂಟೆಗೆ ಖುದ್ದಾಗಿ ಅಥವಾ ನಿಮ್ಮ ಪರ ವಕೀಲರ ಮೂಲಕ ಕೋರ್ಟಿಗೆ ಹಾಜರಾಗಿ ನಿಮ್ಮ ತಕರಾರು ವಗೈರೆ ಇದ್ದಲ್ಲಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ನಿಮ್ಮ ಅನುಪಸ್ಥಿತಿಯಲ್ಲಿ ವಿಚಾರಣೆ ಕೈಗೊಂಡು ನಿಮ್ಮ ವಿರುದ್ಧ ಏಕಕ್ಷೀಯವಾಗಿ ತೀರ್ಮಾನ ಮಾಡಲಾಗುವುದು.

**ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ: 23.7.2021ರಂದು ನೋಟಿಸಿಗೆ ಆದೇಶಿಸಿದೆ.**

ವಾದಿ ಪರ ವಕೀಲರು
**ಎಸ್.ಆರ್. ಚಂದ್ರಶೇಖರ್,**
ವಕೀಲರು, ದಾವಣಗೆರೆ.
ಮೊ ನಂ: 99454 99376

ನ್ಯಾಯಾಲಯದ ಆದೇಶದ ಮೇರೆಗೆ
**ಬಿ. ಶ್ರೀನಿವಾಸ**
ಮುಖ್ಯ ಆಡಳಿತ ಅಧಿಕಾರಿ,
ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ.



**ದಾವಣಗೆರೆ ಘನ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ**

**ಅಸಲು ದಾವಾ ಸಂ. 543/2017**
**ವಾದಿ : ಬಿ. ನಾಗೇಶಪ್ಪ - ವಿರುದ್ಧ -**
**ಪ್ರತಿವಾದಿಯರು : ಶ್ರೀಮತಿ ಮಲಪ್ರಭಬಾಯಿ ಹಾಗೂ ಇತರರು**

ಮೇಲ್ಕಂಡ ವಾದಿಯೂ ಪ್ರತಿವಾದಿಗಳ ವಿರುದ್ಧ ನ್ಯಾಯಾಲಯದಲ್ಲಿ ತನ್ನ ಪರವಾಗಿ ಘೋಷಣೆ ಹಾಗೂ ಕಡ್ಡಾಯ ತಡೆಯಾಜ್ಞೆ ಕೋರಿದ್ದು, ಈ ಕೆಳಗೆ ವಿವರವಾಗಿ ನಮೂದಿಸಲಾದ ಪ್ರತಿವಾದಿಯರು ದಿನಾಂಕ : 27.08.2021 ರಂದು ಮೇಲ್ಕಂಡ ನ್ಯಾಯಾಲಯದ ಮುಂದೆ ಬೆಳಿಗ್ಗೆ 11 ಘಂಟೆಗೆ ಖುದ್ದಾಗಿ ಆಗಲೀ ಅಥವಾ ತಮ್ಮ ನ್ಯಾಯವಾದಿಗಳ ಮುಖಾಂತರವಾಗಲೀ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಮತ್ತು ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಸಲ್ಲಿಸಲು ಈ ಮೂಲಕ ಆಜ್ಞಾಪಿಸಲಾಗಿದೆ. ಒಂದು ವೇಳೆ ಈ ಪ್ರಕಟಣೆಯ ನಂತರದಲ್ಲೂ ಹಾಜರಾಗಲು ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ಆದೇಶ ಮಾಡಲಾಗುವುದು ತಿಳಿಯಿರಿ.

**ಪ್ರತಿವಾದಿಯರು ಮತ್ತು ಅವರ ವಿಳಾಸ :**

1) ಶ್ರೀಮತಿ ಮಲಪ್ರಭಾ ಬಾಯಿ ಕೋಂ ಲೇಟ್ ಲಕ್ಷ್ಮಣ ರಾವ್, ವಯಸ್ಸು 78 ವರ್ಷ, 2) ಶ್ರೀಮತಿ ಉಮಾ ಬಿನ್ ದಿವಂಗತ ಲಕ್ಷ್ಮಣ ರಾವ್, ವಯಸ್ಸು 58 ವರ್ಷ, 3) ಶ್ರೀಮತಿ ವೀಣಾ ಬಿನ್ ದಿವಂಗತ ಲಕ್ಷ್ಮಣ ರಾವ್, ವಯಸ್ಸು 50 ವರ್ಷ, 4) ಶ್ರೀಮತಿ ಪುಟ್ಟಿ ಬಿನ್ ದಿವಂಗತ ಲಕ್ಷ್ಮಣ ರಾವ್, ವಯಸ್ಸು 48 ವರ್ಷ, 1 ರಿಂದ 4 ಪ್ರತಿವಾದಿಗಳು ಆರ್/ಒ, 6ನೇ ಕ್ರಾಸ್, ಟ್ಯಾಂಕ್ ಮೊಹಲ್ಲಾ, ಉರ್ದು ಶಾಲೆಯ ಹತ್ತಿರ, ಶಿವಮೊಗ್ಗ, 5) ಪ್ರತಾಪ್ ರಾವ್ ಶಿಂಧೆ ಬಿನ್ ಲೇಟ್ ದೇವೇಂದ್ರಪ್ಪ, ವಯಸ್ಸು 60 ವರ್ಷ, ಕೆಲಸ : ಕೆಎಸ್‌ಆರ್‌ಟಿಸಿ ಡಿಪೋದಲ್ಲಿ ಮೆಕ್ಯಾನಿಕ್, ಕೆಎಸ್‌ಆರ್ಟಿಸಿ ಬಸ್ ಸ್ಟ್ಯಾಂಡ್, ದಾವಣಗೆರೆ. 6) ಶ್ರೀ ರಾಮಕೃಷ್ಣ ಬಿನ್ ಲೇಟ್ ದೇವೇಂದ್ರಪ್ಪ, ವಯಸ್ಸು 55 ವರ್ಷ, ದುರ್ಗಾಂಬಿಕಾ ದೇವಿ ದೇವಸ್ಥಾನದ ಎದುರು, ನಿಟುವಳ್ಳಿ, ದಾವಣಗೆರೆ. 7) ಶ್ರೀಮತಿ ಶಕುಂತಲಾ ಬಾಯಿ ಕೋಂ ಲೇಟ್ ರಾಣೋಜಿ ರಾವ್ ಶಿಂಧೆ, ವಯಸ್ಸು ಸುಮಾರು 75 ವರ್ಷಗಳು, 8) ಶ್ರೀಮತಿ ಉಷಾ ದೇವಿ, ಲೇಟ್ ಜಗದೀಶ್ ಕೆ. ಬಿನ್ ದಿವಂಗತ ರಾಣೋಜಿರಾವ್, ಒಂದು 8 ಮತ್ತು 9 ಆರೋಪಿಗಳು ವಾಸ #320/ಎ, ಎಂ.ಸಿ.ಸಿ. ಎ ಬ್ಲಾಕ್, ಶೈಲೇಂದ್ರ ಜಾಧವ್ ಕಟ್ಟಡ, ಶ್ರೀ ಲಕ್ಷ್ಮಿ ಅಂಬಾ ಸದನ, ಆಶ್ರಯ ಆಸ್ಪತ್ರೆ ರಸ್ತ, ದಾವಣಗೆರೆ.

ನ್ಯಾಯಾಲಯದ ಮೊಹರು ಹಾಗೂ ಆದೇಶದೊಂದಿಗೆ ತಾರೀಖು 26,07.2021 ರಂದು ನನ್ನ ಕೈ ಮತ್ತು ನ್ಯಾಯಾಲಯದ ಮುದ್ರೆಯೊಟ್ಟಿಗೆ ನೀಡಲಾಗಿದೆ.

ಸಹಿ/-
ಹೆಚ್.ಎಸ್. ವೆಂಕಟೇಶ್, ನ್ಯಾಯವಾದಿಗಳು
ಎಸ್.ಕೆ.ಪಿ. ರಸ್ತೆ, ದಾವಣಗೆರೆ-1

ನ್ಯಾಯಾಧೀಶರ ಪರವಾಗಿ
ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಘನ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ,
ದಾವಣಗೆರೆ.




ಮಹಿಳಾ ಸೇವಾ ಸಮಾಜ (ರಿ.)


**ಶ್ರೀಮತಿ ಟಿ.ಎಂ. ಚಿನ್ನಮ್ಮ ಶ್ರೀ ಮಹೇಶ್ವರಯ್ಯ ಮೆಮೋರಿಯಲ್ ಪದವಿಪೂರ್ವ ಕಾಲೇಜು**

(ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)

ಅಶೋಕ ರಸ್ತೆ, ದಾವಣಗೆರೆ-577 002. ಫೋನ್ : 233010




ದ್ವಿತೀಯ ಪಿಯುಸಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾದವರಿಗೆ ಆಡಳಿತ ಮಂಡಳಿ ಪ್ರಾಂಶುಪಾಲರು, ಅಧ್ಯಾಪಕ ವೃಂದದವರು ಅಭಿನಂದನೆಗಳನ್ನು ಸಲ್ಲಿಸಿರುತ್ತಾರೆ



ಕಾವ್ಯ ಪಿ.
516-86%
ಕಲಾ ವಿಭಾಗ



ಪೂಜಾ ಡಿ.
505-84%
ವಾಣಿಜ್ಯ ವಿಭಾಗ

**2021-22ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಪ್ರಥಮ ಪಿಯುಸಿ ಕಲಾ ಮತ್ತು ವಾಣಿಜ್ಯ ತರಗತಿಗಳಿಗೆ ಪ್ರವೇಶ ಪ್ರಕಟಣೆ**

**ಸಂಯೋಜನೆಗಳು :**

1) ಕಲಾ ವಿಭಾಗ - ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ (HEPS).
2) ಶಿಕ್ಷಣ ವಿಭಾಗ - ಇತಿಹಾಸ, ಶಿಕ್ಷಣ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ (HEPE)
3) ವಾಣಿಜ್ಯ ವಿಭಾಗ - ಅರ್ಥಶಾಸ್ತ್ರ, ವ್ಯವಹಾರ ಅಧ್ಯಯನ, ಲೆಕ್ಕಶಾಸ್ತ್ರ, ಕಂಪ್ಯೂಟರ್ ವಿಜ್ಞಾನ (ABEC).

2020-21ನೇ ಸಾಲಿನ ದ್ವಿತೀಯ ಪಿಯುಸಿ **100%** ಉತ್ತಮ ಫಲಿತಾಂಶ

**ವಿಷಯ ಸಂಯೋಜನೆಗಳು :**

ಭಾಗ -1 : ಕನ್ನಡ, ಇಂಗ್ಲಿಷ್, ಹಿಂದಿ. ಭಾಗ - 2 : ಐಚ್ಛಿಕ ವಿಷಯಗಳು

ಕಡಿಮೆ ಶುಲ್ಕದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ

**ಕಾಲೇಜಿನ ವೈಶಿಷ್ಟ್ಯತೆ :**

✿ ಕಾಲೇಜ್ ನಗರದ ಮಧ್ಯ ಭಾಗದಲ್ಲಿದೆ. ಸುತ್ತಮುತ್ತ ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಬಸ್‌ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳಿಗೆ ಹತ್ತಿರದಲ್ಲಿರುತ್ತದೆ.
✿ ವಿಶಾಲವಾದ ಕಟ್ಟಡ ✿ ಸುಸಜ್ಜಿತವಾದ ಗ್ರಂಥಾಲಯ
✿ ಅನುಭವಿ ಉಪನ್ಯಾಸಕರಿಂದ ಬೋಧನೆ
✿ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು
✿ ಹೆಣ್ಣು ಮಕ್ಕಳಿಗೆ ವಿಶೇಷವಾದ ಭದ್ರತೆ ಹಾಗೂ ವೈಯಕ್ತಿಕ ಗಮನ
✿ ಮಾಸಿಕ ಪರೀಕ್ಷೆಗಳ ಮೂಲಕ ಪ್ರಗತಿಯೆಡೆಗೆ

ಪ್ರವೇಶದ ಅರ್ಜಿಗಳನ್ನು ಬೆಳಿಗ್ಗೆ 10.30 ರಿಂದ 2 ಗಂಟೆಯವರೆಗೆ ವಿತರಿಸಲಾಗುವುದು.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :**

ಶ್ರೀಮತಿ ಕೆ.ಕೆ. ಸುಶೀಲಮ್ಮ, ಅಧ್ಯಕ್ಷರು
ಶ್ರೀಮತಿ ಜಯ್ಯಮ್ಮ ನೀಲಗುಂದ, ಕಾರ್ಯದರ್ಶಿ
ಶ್ರೀ ಕೆ.ಎಸ್. ರವಿಕುಮಾರ್ ಪ್ರಾಚಾರ್ಯರು.


# ಸಾಧನಾ ವೃದ್ಧಾಶ್ರಮಕ್ಕೆ ಭೋಜನ ಜತೆ ಆಹಾರ ದಿನಸಿ ವಿತರಣೆ



ದಾವಣಗೆರೆ, ಜು. 26- ತುರ್ಚಘಟ್ಟದ ಸಾಧನಾ ವೃದ್ಧಾಶ್ರಮ ಮತ್ತು ಅನಾಥಾಶ್ರಮದಲ್ಲಿ ನಗರದ ಆರ್ಯ ವೈಶ್ಯ ಮುಖಂಡರು, ಎಸ್.ಕೆ.ಪಿ. ಬ್ಯಾಂಕ್ ಮಾಜಿ ಉಪಾಧ್ಯಕ್ಷ ಬಿ.ಪಿ.ನಾಗಭೂಷಣ್ ಅವರ 75ನೇ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸಾಧನಾ ವೃದ್ಧಾಶ್ರಮ ಮತ್ತು ಅನಾಥಾಶ್ರಮದ ವೃದ್ಧರು ಹಾಗೂ ಅನಾಥರಿಗೆ ಭೋಜನದ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು. ಬಿ.ಪಿ. ನಾಗಭೂಷಣ್ ಅವರು ಭೋಜನ ವ್ಯವಸ್ಥೆಯ ಜೊತೆಗೆ ಆಹಾರ ದಿನಸಿಗಳನ್ನು ಆಶ್ರಮಕ್ಕೆ ನೀಡಿದರು.

ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಪುಷ್ಪಲತ ಅವರು, ನಾಗಭೂಷಣ್ ಅವರಿಗೆ ಜನ್ಮದಿನದ ಶುಭಾಶಯ ಹೇಳಿದರು. ಇದೇ ವೇಳೆ ಅವರು ಮಾತನಾಡಿ, ಮನೆಯಲ್ಲಿ ಉಪಯೋಗಿಸದೇ ಇರುವ ವಸ್ತುಗಳಿದ್ದರೆ ಆಶ್ರಮಕ್ಕೆ ತಲುಪಿಸುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಬಿ.ಪಿ. ನಾಗಭೂಷಣ್ ಅವರನ್ನು ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನ ಸಂಘದಿಂದ ಸನ್ಮಾನಿಸಲಾಯಿತು. ಕನ್ನಿಕಾಪರಮೇಶ್ವರಿ ದೇವಸ್ಥಾನ ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್, ಕಾರ್ಯಾಧ್ಯಕ್ಷ ಕಾಸಲ್ ಸತೀಶ್, ಆರ್ಯವೈಶ್ಯ ಮುಖಂಡರಾದ ಎ.ಎಸ್. ಸತ್ಯನಾರಾಯಣ ಸ್ವಾಮಿ, ಕೆ.ಎನ್. ಅನಂತರಾಮ ಶೆಟ್ಟಿ, ಎಂ.ಕೆ. ನಾಗೇಂದ್ರ, ನಾಗರಾಜ ಗುಪ್ತ, ಕೃಷ್ಣಮೂರ್ತಿ, ರಂಗನಾಥಶಟ್ಟಿ, ಬಿ. ಎಸ್.ಶಿವಾನಂದ ಮತ್ತಿತರರು ಉಪಸ್ಥಿತರಿದ್ದರು.

# ಅವಳಿ ತಾಲ್ಲೂಕನ್ನು ಅತಿವೃಷ್ಟಿ ಪೀಡಿತ ಎಂದು ಘೋಷಿಸಿ



**ಎಂಪಿಆರ್ ಮನವಿ**

ನ್ಯಾಮತಿ, ಜು.26- ಅವಳಿ ತಾಲ್ಲೂಕಿನಲ್ಲಿ ಸುರಿದ ಭಾರೀ ಮಳೆಯಿಂದಾಗಿ ಅಪಾರ ಪ್ರಮಾಣದ ನಷ್ಟ ಉಂಟಾಗಿದ್ದು, ಅವಳಿ ತಾಲ್ಲೂಕನ್ನು ಅತಿವೃಷ್ಟಿ ಪೀಡಿತ ತಾಲ್ಲೂಕು ಎಂದು ಘೋಷಣೆ ಮಾಡುವಂತೆ ಮುಖ್ಯಮಂತ್ರಿಗಳ ಬಳಿ ಮನವಿ ಮಾಡುವುದಾಗಿ ಶಾಸಕ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು.

ಸೋಗಿಲು, ಚಟ್ನಳ್ಳಿ, ಗಂಜೇನಹಳ್ಳಿ, ಫಲವನಹಳ್ಳಿ, ಕುಂಕೋವಾ, ಒಡೆಯರಹತ್ತೂರು, ಗಂಗನಕೋಟೆ, ಕಂಕನಹಳ್ಳಿ, ಕೊಡಚಗೊಂಡನಹಳ್ಳಿ, ದಾನಿಹಳ್ಳಿ, ಆರುಂಡಿ, ರಾಮೇಶ್ವರ ಗ್ರಾಮಗಳಿಗೆ ಭೇಟಿ ನೀಡಿದ ಶಾಸಕರು ಮಳೆಯಿಂದಾದ ಹಾನಿಯನ್ನು ಪರಿಶೀಲನೆ ನಡೆಸಿ ಮಾತನಾಡಿದರು.

ತಾಲ್ಲೂಕಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾದ ಪರಿಣಾಮ ಹಳ್ಳಕೊಳ್ಳಗಳು, ಕೆರೆಕಟ್ಟೆಗಳು ಮೈದುಂಬಿ ಹರಿದರೆ, ಮತ್ತೆ ಕೆಲವು ಕಡೆ ಕೆರೆಗಳು, ನಾಲೆಗಳು ಒಡೆದು ರೈತರ ಜಮೀನಿಗೆ ನೀರು ನುಗ್ಗಿದ ಪರಿಣಾಮ ಅಪಾರ ಪ್ರಮಾಣದ ಬೆಳೆಯಾಗಿದೆ ಎಂದರು.

ಅವಳಿ ತಾಲ್ಲೂಕಿನಾದ್ಯಂತ 107 ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದ್ದು, ಈಗಾಗಲೇ ಅಧಿಕಾರಿಗಳಿಗೆ ವರದಿ ನೀಡುವಂತೆ ಸೂಚಿಸಿದ್ದೇನೆ ಎಂದ ಶಾಸಕರು, ಬೆಳೆ ಹಾನಿಯ ಬಗ್ಗೆ ಕಂದಾಯ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಜಂಟಿ ಸರ್ವೇ ಮಾಡಿ ವರದಿ ನೀಡುವಂತೆ ಸೂಚನೆ ನೀಡಿದರು.

ಈ ಸಂದರ್ಭ ಉಪತಹಶೀಲ್ದಾರ್ ನಾಗರಾಜ್, ಆರ್.ಐ. ಸುಧೀರ್, ನಿರ್ದೇಶಕ ಶಿವ ಹುಡೇದ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳಿದ್ದರು.

# ಕಲಿಕಾ ಸಾಧನೆ ಅಳೆಯಲು ನವೆಂಬರ್‌ನಲ್ಲಿ ಸಮೀಕ್ಷೆ

ನವದೆಹಲಿ ಜು. 26 – ಸರ್ಕಾರಿ ಹಾಗೂ ಖಾಸಗಿ ಶಾಲೆಗಳ ಮಕ್ಕಳ ಕಲಿಕಾ ಸಾಧನೆಯ ಕುರಿತು ಅಳೆಯಲು ಬರುವ ನವೆಂಬರ್‌ನಲ್ಲಿ ಎನ್.ಸಿ.ಇ.ಆರ್.ಟಿ. ರಾಷ್ಟ್ರೀಯ ಸಮೀಕ್ಷೆ ನಡೆಸಲಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ.

ಈ ಹಿಂದೆ 3, 5 ಮತ್ತು 8ನೇ ತರಗತಿಗಳಿಗಾಗಿ 2017ರಲ್ಲಿ ಮತ್ತು 10 ನೇ ತರಗತಿಗಾಗಿ 2018ರಲ್ಲಿ ರಾಷ್ಟ್ರೀಯ ಸಾಧನಾ ಸಮೀಕ್ಷೆ (ಎನ್.ಎ.ಎಸ್.) ನಡೆಸಲಾಗಿತ್ತು.

ಲೋಕಸಭೆಗೆ ಈ ಕುರಿತು ಮಾಹಿತಿ ನೀಡಿರುವ ಸಚಿವ ಪ್ರಧಾನ್, ದೇಶದ ಶಾಲಾ ಶಿಕ್ಷಣದ ಗುಣಮಟ್ಟ ಅಳೆಯಲು ಇಂತಹ ಸಮೀಕ್ಷೆ ನಡೆಸಲಾಗುತ್ತಿದೆ. ವಿಶೇಷವಾಗಿ ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ತರಗತಿಗಳು ಹೆಚ್ಚಾಗಿರುವುದರಿಂದ ಸಮೀಕ್ಷೆಯ ಅಗತ್ಯವಿದೆ ಎಂದವರು ತಿಳಿಸಿದ್ದಾರೆ.

# ಜೋಗಕ್ಕೆ ವಿಶೇಷ ಸಾರಿಗೆ ಬಸ್



ದಾವಣಗೆರೆ, ಜು. 26- ವಿಶ್ವವಿಖ್ಯಾತ ಜೋಗ ಜಲಪಾತ ವೀಕ್ಷಣೆಗೆ ದಾವಣಗೆರೆ ವಿಭಾಗದ ದಾವಣಗೆರೆ ಮತ್ತು ಹರಿಹರದಿಂದ ರಾಜಹಂಸ ಸಾರಿಗೆ ವಿಶೇಷ ಪ್ಯಾಕೇಜ್ ಸೇವೆ ಆರಂಭಿಸಲಾಗಿದೆ. ಭಾನುವಾರದಂದು ಮಾತ್ರ ಈ ಸೇವೆ ಪ್ರಾರಂಭಿಸಲಾಗಿತ್ತು. ಆದರೆ, ಈ ಪ್ಯಾಕೇಜ್ ಪ್ರಯಾಣಕ್ಕೆ ಸಾರ್ವಜನಿಕ ಪ್ರಯಾಣಿಕರಿಂದ ಉತ್ತಮ ಸ್ಪಂದನೆ ಬಂದ ಕಾರಣ ಆ.1 ರಿಂದ ವಾರದ ಎಲ್ಲಾ ದಿನಗಳಂದು ಬಸ್ ಕಾರ್ಯಾಚರಣೆ ನಡೆಸಲು ಉದ್ದೇಶಿಸಲಾಗಿದೆ.

ದಾವಣಗೆರೆಯಿಂದ ಬೆಳಿಗ್ಗೆ 7 ಕ್ಕೆ ಹೊರಟು, ಹರಿಹರ 7-30, ಶಿರಸಿ-ಬೆ. 10.30 ಕ್ಕೆ ತಲುಪುತ್ತದೆ. 12 ಕ್ಕೆ ಶಿರಸಿಯಿಂದ ಹೊರಟು ಮಧ್ಯಾಹ್ನ 1.30 ಕ್ಕೆ ಜೋಗವನ್ನು ತಲುಪುತ್ತದೆ. ಸಂಜೆ 4.30 ಕ್ಕೆ ಜೋಗದಿಂದ ಹೊರಟು ರಾತ್ರಿ 8 ಗಂಟೆಗೆ ದಾವಣಗೆರೆಯನ್ನು ತಲುಪುತ್ತದೆ. ಪ್ರಯಾಣ ದರ 500 ರೂ. (ಹೋಗಿ ಬರುವ 2 ಬದಿ ಸೇರಿ) ಮಕ್ಕಳಿಗೆ 375 ರೂ. ಹರಿಹರದಿಂದ ಹೊರಡುವ ಪ್ರಯಾಣಿಕರಿಗೆ ದರ 475 ರೂ. ಮಕ್ಕಳಿಗೆ ರೂ 350 ರೂ. ನಿಗದಿಪಡಿಸಲಾಗಿದೆ. ಮುಂಗಡ ಬುಕ್ಕಿಂಗ್ ಕೌಂಟರ್‌ಗಳಲ್ಲಿ ಬುಕ್ಕಿಂಗ್ ಸೌಕರ್ಯ ಕಲ್ಪಿಸಲಾಗಿದೆ ಎಂದು ದಾವಣಗೆರೆ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಧಿಬಲಿ ಕಿರು ಚಿತ್ರಕ್ಕೆ ಚಾಲನೆ



ಹೂವಿನಹಡಗಲಿ, ಜು.26- ವಿಧಿಬಲಿ ಕಿರು ಚಲನಚಿತ್ರದ ಮಹೂರ್ತ ಸಮಾರಂಭವು ಪಟ್ಟಣದ ನೀರಾವರಿ ಕಾಲೋನಿಯ ಗಣೇಶ ದೇವಸ್ಥಾನದಲ್ಲಿ ಇಂದು ಜರುಗಿತು. ಚೌಕಿಮಠದ ಸದ್ಗುರು ಗಾಡಿ ತಾತಾನವರು ಕ್ಲಾಪ್ ತೋರಿಸುವ ಮೂಲಕ ಚಾಲನೆ ನೀಡಿದರು. ನಿರ್ಮಾಪಕ ಎನ್.ಎಸ್.ಮಂಜುನಾಥ ಮತ್ತು ಪಿ.ವಿಜಯಕುಮಾರ್ ಕ್ಯಾಮೆರಾಕ್ಕೆ ಚಾಲನೆ ಮಾಡಿದರು.

ವೇದಿಕೆಯಲ್ಲಿ ಚಿತ್ರದ ನಿರ್ದೇಶಕ ಸಂದೀಪ ಡಾ.ಮಲ್ಲಿಕಾರ್ಜುನ್ ಗಾಡಿ, ನಾಯಕ ನಟ ಎಸ್.ಎನ್.ಕ್ರಾಂತಿ, ನಾಯಕಿ ನಟಿ ಅಶ್ವಿನಿ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು. ನಂತರ ಪಟ್ಟಣದ ಹೊರವಲಯದಲ್ಲಿ ಚಿತ್ರೀಕರಣ ಮುಂದುವರೆಯಿತು.

# ವರುಣನ ಆರ್ಭಟ ಇಳಿಕೆ : ನೀರಿನ ಪ್ರಮಾಣ ಇಳಿಮುಖ



ಮಲೇಬೆನ್ನೂರು, ಜು.26- ರಾಜ್ಯದಲ್ಲಿ ಕಳೆದ ವಾರ ಅಬ್ಬರಿಸಿದ ವರುಣನ ಆರ್ಭಟ ಕಡಿಮೆಯಾಗಿದ್ದು, ಉಕ್ಕಿ ಹರಿದ ಹಳ್ಳ - ಕೊಳ್ಳ, ನದಿಗಳಲ್ಲೂ ನೀರಿನ ಮಟ್ಟ ಗಣನೀಯವಾಗಿ ಇಳಿಮುಖವಾಗಿದೆ. ಇದರಿಂದಾಗಿ ಜನ ನಿಟ್ಟುಸಿರು ಬಿಡುವಂತಾಗಿದೆ.

ತುಂಗಭದ್ರಾ ನದಿಯ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದ ಉಕ್ಕಡಗಾತ್ರಿ - ತುಮ್ಮಿನಕಟ್ಟೆ ರಸ್ತೆ ಮತ್ತು ಉಕ್ಕಡಗಾತ್ರಿ - ಪತ್ತೇಪುರ ರಸ್ತೆಗಳ ಸಂಪರ್ಕ ಸೇತುವೆಗಳು ಸೋಮವಾರ ನದಿಯಲ್ಲಿ ನೀರಿನ ಹರಿವು ಇಳಿಕೆ ಆಗಿದ್ದರಿಂದ ವಾಹನಗಳ ಸಂಚಾರಕ್ಕೆ ಮುಕ್ತವಾಗಿದ್ದವು.

ಗಾಜನೂರಿನ ತುಂಗಾ ಜಲಾಶಯಕ್ಕೆ ಒಳಹರಿವು ಕಡಿಮೆ ಆಗಿರುವುದರಿಂದ ನದಿಗೆ ಹರಿಯುವ ನೀರಿನ ಪ್ರಮಾಣವು 30 ಸಾವಿರ ಕ್ಯೂಸೆಕ್ಸ್‌ಗೆ ಇಳಿದಿದೆ.

ಭದ್ರಾ ಜಲಾಶಯಕ್ಕೆ ಹರಿದು ಬರುವ ನೀರಿನ ಪ್ರಮಾಣ ಇಳಿಕೆ ಆಗಿದ್ದು, ಸೋಮವಾರ ಬೆಳಿಗ್ಗೆ 24,770 ಕ್ಯೂಸೆಕ್ಸ್ ಒಳಹರಿವು ಇತ್ತು. ಸಂಜೆ ವೇಳೆಗೆ ಮತ್ತಷ್ಟು ಕಡಿಮೆ ಆಗಿತ್ತು ಎನ್ನಲಾಗಿದೆ.

ಜಲಾಶಯದ ನೀರಿನ ಮಟ್ಟ 180 ಅಡಿ ಆಗಿದ್ದು, ಜಲಾಶಯ ಭರ್ತಿಗೆ 6 ಅಡಿ ಮಾತ್ರ ಬಾಕಿ ಇದೆ. ಕಳೆದ ವರ್ಷ ಈ ದಿನ ಜಲಾಶಯದಲ್ಲಿ 154 ಅಡಿ ನೀರಿತ್ತು.

**ನಾಲೆಗೆ ನೀರು :** ಭದ್ರಾ ಜಲಾಶಯದಿಂದ ಬಲದಂಡೆ ಕಾಲುವೆಗೆ ಭಾನುವಾರದಿಂದ 1 ಸಾವಿರ ಕ್ಯೂಸೆಕ್ಸ್ ನೀರನ್ನು ಬಿಡಲಾಗುತ್ತಿದ್ದು, ಹಂತ - ಹಂತವಾಗಿ ನೀರಿನ ಪ್ರಮಾಣವನ್ನು ಹೆಚ್ಚಿಸುವ ಸಾಧ್ಯತೆ ಇದೆ.

**ಮುನ್ಸೂಚನೆ :** ಮತ್ತೆ ಮಳೆ ಬರುವ ಮುನ್ಸೂಚನೆ ಇದ್ದು, ಭದ್ರಾ ಜಲಾಶಯಕ್ಕೆ ಒಳಹರಿವು ಹೆಚ್ಚಾದರೆ ಯಾವುದೇ ಕ್ಷಣದಲ್ಲಿ ಜಲಾಶಯದ ಕ್ರೆಸ್ಟ್ ಗೇಟ್‌ಗಳ ಮೂಲಕ ನದಿಗೆ ಹೆಚ್ಚುವರಿ ನೀರನ್ನು ಬಿಡಲಾಗುವುದು. ಆದ್ದರಿಂದ ನದಿ ಪಾತ್ರದ ಜನರು ಎಚ್ಚರಿಕೆ ವಹಿಸುವಂತೆ ಭದ್ರಾ ಅಧೀಕ್ಷಕ ಅಭಯಂತರ ಎಂ.ಚಂದ್ರಹಾಸ ಅವರು ತಿಳಿಸಿದ್ದಾರೆ.

**ಉಕ್ಕಡಗಾತ್ರಿ ರಸ್ತೆಗಳು ಸಂಚಾರಕ್ಕೆ ಮುಕ್ತ**

**ಹೊಸಪೇಟೆ ಡ್ಯಾಂನಿಂದ ನದಿಗೆ ನೀರು :** ಹೊಸಪೇಟೆ ಸಮೀಪ ಇರುವ ತುಂಗಭದ್ರಾ ಜಲಾಶಯಕ್ಕೆ ಭಾನುವಾರ ಒಂದು ಲಕ್ಷದ ಅರವತ್ತೆಂಟು ಸಾವಿರ ಕ್ಯೂಸೆಕ್ಸ್ ಒಳಹರಿವು ಇದ್ದ ಕಾರಣ ಮುಂಜಾಗ್ರತಾ ಕ್ರಮವಾಗಿ ಜಲಾಶಯದ ಕ್ರೇಸ್ಟ್‌ಗೇಟ್‌ಗಳ ಮೂಲಕ ನದಿಗೆ ನೀರು ಹರಿಸಲಾಗುತ್ತಿದೆ. 1633 ಅಡಿ ಪೂರ್ಣ ಮಟ್ಟದ ತುಂಗಭದ್ರಾ ಜಲಾಶಯದಲ್ಲೀಗ 1630 ಅಡಿ ನೀರು ದಾಖಲಾಗಿದೆ.

**ಮಳೆ ಸಾಧ್ಯತೆ :** ರಾಜ್ಯದಲ್ಲಿ ಇನ್ನೂ ಕೆಲವು ದಿನ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

# ಶಿಕ್ಷಕ ವೃತ್ತಿಗಿಂತ ಶ್ರೇಷ್ಠ ವೃತ್ತಿ ಬೇರೊಂದಿಲ್ಲ



**ಜಗಳೂರು**

ಜಗಳೂರು, ಜು.26- ಶಿಕ್ಷಕ ವೃತ್ತಿಗಿಂತ ಶ್ರೇಷ್ಠ ವೃತ್ತಿ ಬೇರೊಂದಿಲ್ಲ. ತಮ್ಮಲ್ಲಿರುವ ಜ್ಞಾನವನ್ನು ಮಕ್ಕಳಿಗೆ ಧಾರೆ ಎರೆಯಬೇಕು ಎಂದು ನಿವೃತ್ತ ಮುಖ್ಯ ಶಿಕ್ಷಕ ಎ.ಕೆ. ಯಲ್ಲಪ್ಪ ಹೇಳಿದರು.

ಇಲ್ಲಿನ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಭಾನುವಾರ ಆದಿಜಾಂಬವ ಸಾಂಸ್ಕೃತಿಕ ನೌಕರರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಮಾಜದಲ್ಲಿ ಜಾತೀಯತೆ, ಅಸ್ಪೃಶ್ಯತೆ ಶತ ಶತಮಾನಗಳಿಂದಲೂ ದಲಿತರ ಮೇಲೆ ನಡೆದುಕೊಂಡು ಬಂದಿದೆ. ಶಿಕ್ಷಣ ಕ್ಷೇತ್ರ ಸೇರಿದಂತೆ, ಪ್ರತಿಯೊಂದು ಕ್ಷೇತ್ರಗಳಲ್ಲೂ ಜಾತಿ ವ್ಯವಸ್ಥೆ ಇನ್ನು ಜೀವಂತವಾಗಿದೆ ಎಂದು ವಿಷಾದಿಸಿದರು.

ಡಾ. ಬಿ.ಆರ್. ಅಂಬೇಡ್ಕರ್ ಬಾಲ್ಯದ ಜೀವನದಿಂದ ಮರಣದವರೆಗೂ ಮಡಿಲಲ್ಲಿ ಬೆಂಕಿಯನ್ನು ಕಟ್ಟಿಕೊಂಡು ಹೋರಾಟ ನಡೆಸಿ, ಸಂವಿಧಾನ ಬರೆಯುವ ಮೂಲಕ ಎಲ್ಲಾ ಜಾತಿ, ಜನಾಂಗಕ್ಕೂ ಸ್ವಾತಂತ್ರ್ಯ, ಸಮಾನತೆ, ಮೀಸಲಾತಿಯನ್ನು ಕೊಟ್ಟಂತಹ ಮಹಾನ್ ತ್ಯಾಗಿ. ಅವರನ್ನು ಪ್ರತಿಯೊಬ್ಬರು ಗೌರವಿಸಬೇಕು ಎಂದರು.

ಸಮಾರಂಭದಲ್ಲಿ ನಿವೃತ್ತ ಶಿಕ್ಷಕರಾದ ಕೃಷ್ಣಪ್ಪ, ಪ್ರಭು, ಎ.ಕೆ. ಯಲ್ಲಪ್ಪ, ಸೋಮಣ್ಣ, ನಿಂಗಪ್ಪ, ವೀರಭದ್ರಪ್ಪ ಅವರುಗಳನ್ನು ಸನ್ಮಾನಿಸಲಾಯಿತು.

ಸಂಘದ ಕಾರ್ಯದರ್ಶಿ ಶಿವಣ್ಣ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಪ್ರಕಾಶ್, ಸಹ ಕಾರ್ಯದರ್ಶಿ ಬಿ.ಎಂ. ಹನುಮಂತೇಶ್, ಪ್ರಾ.ಶಾ. ಪದವೀಧರ ಶಿಕ್ಷಕರ ಸಂಘದ ಅಧ್ಯಕ್ಷ ರಾಜ್‌ಕೋಟಿ, ಎನ್‌ಜಿಒ ಸದಸ್ಯ ಉಮೇಶ್, ನಾಮ ನಿರ್ದೇಶಿತ ಸದಸ್ಯ ಆನಂದಪ್ಪ, ಶಿಕ್ಷಕಿಯರಾದ ಇಂದ್ರಮ್ಮ, ದುರುಗಮ್ಮ, ಮಂಜಮ್ಮ ಇನ್ನಿತರರಿದ್ದರು.

# ರೆಡ್‌ಕ್ರಾಸ್‌ನಿಂದ ಗರ್ಭಿಣಿಯರಿಗೆ ಆಹಾರದ ಕಿಟ್



**ಎಲೆಬೇತೂರು**

ದಾವಣಗೆರೆ, ಜು.26 - ತಾಲ್ಲೂಕಿನ ಎಲೆಬೇತೂರು ಗ್ರಾಮದಲ್ಲಿ ಅಜೀಮ್ ಪ್ರೇಮ್‌ಜೀ ಫೌಂಡೇಷನ್ ಸಹಾಯದಿಂದ ಜಿಲ್ಲಾ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯಿಂದ ಕೊರೊನಾ ಸಂಕಷ್ಟದಲ್ಲಿ 'ಗರ್ಭಿಣಿಯರಿಗೆ ಪ್ರೋಟೀನ್‌ಯುಕ್ತ ಆಹಾರದ ಕಿಟ್'ಗಳನ್ನು ವಿತರಿಸುವ ಕಾರ್ಯಕ್ರಮವು ಗ್ರಾಮದ ದುರ್ಗಾಂಬಿಕಾ ಸಮುದಾಯ ಭವನದಲ್ಲಿ ಇಂದು ನಡೆಯಿತು.

ಗ್ರಾಮದ ಮುಖಂಡ ಹೆಚ್. ಬಸವರಾಜಪ್ಪ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ 32 ಅಂಗನವಾಡಿ ಕೇಂದ್ರಗಳಿಗೆ ಒಳಪಟ್ಟ ಆಲೂರು, ಆಲೂರುಹಟ್ಟಿ ವೃತ್ತದ ವ್ಯಾಪ್ತಿಯ 246 ಜನ ಗರ್ಭಿಣಿಯರಿಗೆ ಕಿಟ್‌ಗಳನ್ನು ವಿತರಿಸಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯದರ್ಶಿ ಡಿ.ಎಸ್. ಸಾಗರ್, ಕೊರೊನಾ ಸಂಕಷ್ಟದಲ್ಲಿ ಸಂಸ್ಥೆಯು ಗರ್ಭಿಣಿಯರಿಗಾಗಿ ಆಹಾರ ಕಿಟ್ ವಿತರಿಸುವ ಇಂತಹ 230 ಕಾರ್ಯಕ್ರಮಗಳನ್ನು ಈಗಾಗಲೇ ಮಾಡಿದೆ. ಇದರ ಅಡಿಯಲ್ಲಿ ರಕ್ತದಾನ ಶಿಬಿರ, ಶಾಲಾ ಮಕ್ಕಳಿಗೆ ರಕ್ತಪರೀಕ್ಷೆ ಮಾಡಿ ರಕ್ತದ ಗುಂಪುಗಳನ್ನು ತಿಳಿಸುವಂತಹ ಹಲವು ಸಾಮಾಜಿಕ ಕಾರ್ಯಕ್ರಮಗಳನ್ನು ಮಾಡುತ್ತಿದೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಗ್ರಾಮದ ಮುಖಂಡರುಗಳಾದ ಬಿ. ಕರಿಬಸಪ್ಪ, ಬಿ.ಜಿ. ಸಂಗನಗೌಡ್ರು, ಬಿ. ವಿರೂಪಾಕ್ಷಪ್ಪ ಮಾತನಾಡಿದರು. ಗ್ರಾಮದ ಮುಖಂಡ ಎನ್. ಬಸವರಾಜಪ್ಪ, ತಾಲ್ಲೂಕು ಕಸಾಪ ನಿರ್ದೇಶಕ ಎಂ. ಷಡಕ್ಷರಪ್ಪ, ಹಳ್ಳಿಕೇರಿ ರಾಜಪ್ಪ, ಎ.ಕೆ. ನಾಗೇಂದ್ರಪ್ಪ, ಎ.ಕೆ. ಬಸಪ್ಪ, ನಾಗರಕಟ್ಟೆ ಬಸಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರೆಡ್‌ಕ್ರಾಸ್ ಸಂಸ್ಥೆಯ ಪದಾಧಿಕಾರಿಗಳಾದ ಎನ್.ವಿ. ವಸಂತರಾಜು, ಪೃಥ್ವಿರಾಜ ಬಾದಾಮಿ, ನಾಗರಾಜ ಕೆ.ಕೆ., ಮೋಹನ್‌ಕುಮಾರ್, ಟಿ. ಕರಿಬಸಪ್ಪ, ಉಪ ಸಮಿತಿಯ ಸದಸ್ಯರುಗಳಾದ ಎನ್.ಕೆ. ಕೊಟ್ರೇಶ್, ಮಧುಕೇಶ್ವರ, ಜಗನ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ಉಸ್ತುವಾರಿಯನ್ನು ಗ್ರಾಮದ ಮುಖಂಡ ಎಲಿಗಾರ್ ರಮೇಶ್ ವಹಿಸಿದ್ದರು.

# ಭಜನೆಯಿಂದ ಆತ್ಮಶಕ್ತಿ ದೊರೆಯುತ್ತದೆ



**ಹರಿಹರದ ಶ್ರೀ ರಾಮಕೃಷ್ಣಾಶ್ರಮದ ಶ್ರೀ ಶಾರದೇಶಾನಂದಜೀ**

ಮಲೇಬೆನ್ನೂರು, ಜು.26-ದೀನದೇವೋ ಭವ, ದಲಿತದೇವೋಭವ ಮತ್ತು ರೋಗಿದೇವೋ ಭವ ಎಂಬುದು ಸ್ವಾಮಿ ವಿವೇಕಾನಂದರ ಹೊಸ ವೇದಗಳಾಗಿವೆ ಎಂದು ಹರಿಹರ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಶ್ರೀ ಶಾರದೇಶಾನಂದಜೀ ಮಹಾರಾಜ್ ಅಭಿಪ್ರಾಯಪಟ್ಟರು.

ಸಮೀಪದ ಕುಂಬಳೂರಿನಲ್ಲಿ ಇಂದು ಆಯೋಜಿಸಿದ್ದ 20 ಬಡ ತಾಯಂದಿರಿಗೆ ದಾನಿಗಳ ನೆರವಿಂದ ಪಡೆದ ಆಹಾರ ಪದಾರ್ಥಗಳನ್ನು ವಿತರಿಸಿ, ಶ್ರೀಗಳು ಆಶೀರ್ವಚನ ನೀಡಿದರು.

ಜಾತಿ ಹೊಡೆದೋಡಿಸಿ ಭಜನೆಯತ್ತ ಗಮನ ಹರಿಸಿದರೆ ಅದು ಆತ್ಮಶಕ್ತಿ ಕೊಡುತ್ತೆ. ಭಕ್ತರ ಜವಾಬ್ದಾರಿಯನ್ನು ಸನ್ಯಾಸಿಗಳು ಹೊರಬೇಕು ಎಂದು ಆಶಯ ವ್ಯಕ್ತಪಡಿಸಿದರು.

ರಾಜ್ಯದಾದ್ಯಂತ ಅತಿವೃಷ್ಟಿ ಸಂತ್ರಸ್ತರಿಗೆ ಮತ್ತು ಬಡ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ 10 ಲಕ್ಷ ರೂ. ಮೊತ್ತದ ಸಾಮಗ್ರಿಗಳನ್ನು ವಿತರಣೆ ಮಾಡಲಾಗಿದೆ. ಆ ಮೂಲಕ ಸೇವೆ ಮಾಡಿ ಆನಂದ ಕಾಣಬೇಕು ಎಂದು ಕರೆ ನೀಡಿದರು.

ಗಿರಿಯಮ್ಮ ಪಿಯು ಕಾಲೇಜು ಪ್ರಾಚಾರ್ಯರಾದ ಸುಜಾತ ಸುಬ್ರಹ್ಮಣ್ಯ ಮಾತನಾಡಿ, ಅಹಂಕಾರ ರಹಿತ ಜೀವನ ಸಾರ್ಥಕತೆ ಪಡೆಯುತ್ತದೆ. ನೆಮ್ಮದಿ ಕಾಣುತ್ತೇವೆ ಎಂದು ತಿಳಿಸಿ ಬಡ ವಿದ್ಯಾರ್ಥಿನಿ ರಕ್ಷಿತಾಗೆ ಪಿಯು ವಿದ್ಯಾಭ್ಯಾಸದ ಖರ್ಚು ಭರಿಸುವ ಭರವಸೆ ನೀಡಿದರು.

ಆಹಾರ ಪದಾರ್ಥ ಸ್ವೀಕರಿಸಿದ ಫಲಾನುಭವಿಗಳಾದ, ಮಂಜುಳಾ, ಶ್ವೇತಾ ರೇಣುಕಮ್ಮ, ಕೊಮಾರನಹಳ್ಳಿ ಪ್ರವೀಣ್ ಅನಿಸಿಕೆ ಹಂಚಿಕೊಂಡರು. ದಾನಿಗಳಾದ ಲಕ್ಷ್ಮಿದೇವಿ ಸಿ. ಪಾಲಂಕರ್, ಕೆ. ಕುಬೇರಪ್ಪ, ಬಿ. ಹನುಮಂತಪ್ಪ, ಕೆ.ಎಚ್.ಲಿಂಗರಾಜ್, ವರದಿಗಾರ ಎಚ್.ಎಂ. ಸದಾನಂದ ಮತ್ತಿತರರು ಮಾತನಾಡಿದರು.

ಹೆಚ್.ಎಸ್. ವೈಷ್ಣವಿ ಸ್ವಾಮಿ ವಿವೇಕಾನಂದರ ಕುರಿತು ಭಾಷಣ ಮಾಡಿದರು. ಆರಂಭದಲ್ಲಿ, ಇತ್ತೀಚೆಗೆ ನಿಧನರಾದ ಸಾಮಾಜಿಕ ಕಾರ್ಯಕರ್ತ ಕೆ.ಎನ್.ಹನುಮಂತಪ್ಪ ಹಾಗೂ ಗಡಿಯಲ್ಲಿನ ಮೃತ ಯೋಧರ ಸ್ಮರಣೆಗೆ ಮೌನಾಚರಣೆ ಸಲ್ಲಿಸಲಾಯಿತು.

# ಹಿಂಜಾವೇ-ಎಬಿವಿಪಿಯಿಂದ ಕಾರ್ಗಿಲ್ ವಿಜಯೋತ್ಸವ

**ಹುತಾತ್ಮ ವೀರ ಯೋಧರ ಪ್ರಾಣಾರ್ಪಣೆಗೆ ನಮನ**

ದಾವಣಗೆರೆ, ಜು.26- ಹಿಂದೂ ಜಾಗರಣ ವೇದಿಕೆ, ಎಬಿವಿಪಿ ಸಹಯೋಗದಲ್ಲಿ ನಗರದಲ್ಲಿ ಇಂದು ಸಂಜೆ ಕಾರ್ಗಿಲ್ ವಿಜಯೋತ್ಸವದ 22ನೇ ವರ್ಷಾಚರಣೆ ಪ್ರಯುಕ್ತ ದೇಶ ರಕ್ಷಣೆಗೆ ತಮ್ಮ ಪ್ರಾಣಾರ್ಪಣೆ ಮಾಡಿದ ಹುತಾತ್ಮ ವೀರ ಯೋಧರ ಸ್ಮರಿಸಲಾಯಿತು.

ಜಯದೇವ ವೃತ್ತದಲ್ಲಿ ಮೇಣದ ಬತ್ತಿಗಳ ಬೆಳಕು ಮೂಡಿಸಿ, ಮಹಾತ್ಮ ಗಾಂಧಿ ವೃತ್ತದಿಂದ ಜಯದೇವ ವೃತ್ತದವರೆಗೆ ಜಾಥಾ ನಡೆಸಿ, ಅಲ್ಲಿನ ಅಮರ್ ಜವಾನ್ ಸ್ಮಾರಕ ಪ್ರತಿರೂಪದ ಬಳಿ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಲಾಯಿತು. ಹುತಾತ್ಮರಿಗೆ ಮೌನಾಚರಣೆ ಮಾಡಿ, ಹುತಾತ್ಮ ವೀರ ಯೋಧರ ಸಾಹಸವನ್ನು ನೆನೆಯಲಾಯಿತು.

ಈ ವೇಳೆ ನಗರ ಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್ ಮಾತನಾಡಿ, ಭಾರತೀಯರು ಯಾರ ಮೇಲೂ ದಾಳಿ ಮಾಡಿಲ್ಲ. ಆದರೆ ದಾಳಿಕೋರರನ್ನು ಸುಮ್ಮನೆ ಬಿಟ್ಟಿಲ್ಲ. ಕಾರ್ಗಿಲ್ ಯುದ್ಧದ ಸಂದರ್ಭಕ್ಕೂ ಇದು ಅನ್ವಯವಾಗಿದೆ ಎಂದು ತಿಳಿಸಿದರು.

ಯುದ್ಧದಲ್ಲಿ ಬೆಟಾಲಿಯನ್ ಅಧಿಕಾರಿಯಾಗಿ ಸೈನಿಕರಿಗೆ ಹುರಿದುಂಬಿಸಿದ್ದ ದಿ. ಕರ್ನಲ್ ಎಂ.ಬಿ. ರವೀಂದ್ರನಾಥ್ ಅವರ ಹೆಸರನ್ನು ನಿಜಲಿಂಗಪ್ಪ ಬಡಾವಣೆಯ ವೃತ್ತಕ್ಕೆ ಶೀಘ್ರವೇ ನಾಮಕರಣ ಮಾಡಲಾಗುವುದೆಂದರು.

ಹಿಂಜಾವೇ ಜಿಲ್ಲಾಧ್ಯಕ್ಷ ಮಂಜಾನಾಯ್ಕ ಮಾತನಾಡಿ, ಕಾರ್ಗಿಲ್ ವೀರ ಯೋಧರಂತೆ ದೇಶ ಭಕ್ತಿಯು ಯುವ ಪೀಳಿಗೆಯಲ್ಲಿ ಅರಳಬೇಕಿದೆ ಎಂದು ಆಶಿಸಿದರು.

ಹಿಂಜಾವೇ ವಿಭಾಗೀಯ ಪ್ರಧಾನ ಕಾರ್ಯದರ್ಶಿ ಸತೀಶ್ ಪೂಜಾರಿ ಮಾತನಾಡಿ, ಕಾರ್ಗಿಲ್ ಯುದ್ಧದಲ್ಲಿ 529 ಯೋಧರು ಹುತಾತ್ಮರಾಗಿದ್ದಾರೆ. ಸಾವಿರದಷ್ಟು ಸೈನಿಕರು ವಿಕಲಾಂಗರಾದರು. ದೇಶಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಡುವ ಗಡಿ ಭದ್ರತಾ ಪಡೆ ಯೋಧರನ್ನು ಸ್ಮರಿಸಲು ಈ ವಿಜಯದ ದಿನವನ್ನು ಆಚರಿಸಬೇಕು ಎಂದರು.

ಈ ಸಂದರ್ಭದಲ್ಲಿ ಪ್ರಾಂತ ಅಧ್ಯಕ್ಷ ಜಯಕುಮಾರ್, ಹಿರಿಯ ಮುಖಂಡ ಕೆ.ಬಿ. ಶಂಕರನಾರಾಯಣ್, ವಿಶ್ವನಾಥ್, ಕಲ್ಲೇಶ್, ನವೀನ್, ವಿನಾಯಕ ರಾನಡೆ, ಪ್ರಶಾಂತ್, ಎಸ್. ಚೇತನ್, ನಿರಂಜನ್, ಪವನ್, ಬಿ. ರಾಕೇಶ್, ಹರೀಶ್, ಎಬಿವಿಪಿಯ ಜಿಲ್ಲಾ ಸಂಘಟನಾ ಕಾರ್ಯದರ್ಶಿ ರಾಜೇಂದ್ರ, ಶರತ್ ಸೇರಿದಂತೆ, ಇತರರು ಇದ್ದರು.

# ತೆಪ್ಪದಲ್ಲಿ ಸಾಗಿ ನೆರೆ ಸಂತ್ರಸ್ತರಿಗೆ ವಚನಾನಂದ ಶ್ರೀಗಳ ಸಾಂತ್ವನ



ದಾವಣಗೆರೆ, ಜು.26- ವರದಾ ಮತ್ತು ಧರ್ಮ ಈ ಎರಡೂ ನದಿಗಳ ಸಂಗಮ ಸ್ಥಳವಾದ ಹಾನಗಲ್ ತಾಲ್ಲೂಕಿನ ಕೂಡಲ ಗ್ರಾಮವು ಜಲ ಪ್ರವಾಹದಿಂದ ತೊಂದರೆಗೆ ಸಿಲುಕಿಕೊಂಡು ಗ್ರಾಮ ದ್ವೀಪದಂತಾಗಿದೆ. ಶ್ರೀ ಗುರು ಮಹೇಶ್ವರ ಶಿವಾಚಾರ್ಯ ಮತ್ತು ಹರಿಹರದ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ ಸಂಕಷ್ಟಕ್ಕೆ ಸಿಲುಕಿಕೊಂಡಿರುವ ಭಕ್ತರ ಮನೆಗೆ ತೆಪ್ಪದಲ್ಲಿ ಭೇಟಿ ನೀಡಿ, ಸಾಂತ್ವನ ಹೇಳಿದರು. ಗ್ರಾಮದಲ್ಲಿರುವ ಮಠವೂ ಕೂಡಾ ಪ್ರವಾಹದಿಂದ ತೊಂದರೆಗೀಡಾಗಿದೆ. ಭಕ್ತರ ಮನೆಗಳು ಜಲಾವೃತವಾಗಿವೆ.

# ಜಿಲ್ಲಾ ಕಾಂಗ್ರೆಸ್‌ನಿಂದ ಕಾರ್ಗಿಲ್ ವಿಜಯ ದಿವಸ್



ದಾವಣಗೆರೆ, ಜು.26 - ಜಿಲ್ಲಾ ಕಾಂಗ್ರೆಸ್ ಪಕ್ಷದ ವತಿಯಿಂದ ಕಾರ್ಗಿಲ್ ವಿಜಯ ದಿವಸ್ ಅನ್ನು ನಗರದ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಆಚರಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಹುತಾತ್ಮ ಯೋಧರಿಗೆ ಗೌರವ ಸಲ್ಲಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಮಾತನಾಡಿ, ದೇಶಕ್ಕಾಗಿ ಹುತಾತ್ಮರಾದ ಎಲ್ಲ ಭಾರತೀಯ ಸೈನಿಕರಿಗೂ ಇಂದು ವಿಶೇಷವಾಗಿ ನಮ್ಮ ಗೌರವ ನಮನಗಳನ್ನು ಸಲ್ಲಿಸೋಣ. ವೀರ ಯೋಧರಿಗೆ ಮತ್ತು ಅವರ ಕುಟುಂಬದವರಿಗೆ ಬೆಂಬಲ ಹಾಗೂ ಹೆಮ್ಮೆಯ ಅಭಿನಂದನೆಗಳನ್ನು ಸಲ್ಲಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಮಾತನಾಡಿ, ದೇಶದ ಗಡಿಯಲ್ಲಿ ದೇಶದ ಎಲ್ಲಾ ವರ್ಗಗಳನ್ನು ರಕ್ಷಿಸುತ್ತಿರುವ ಸೈನಿಕರ ಪ್ರಾಣ ತ್ಯಾಗದಿಂದ ನಾವು ಇಂದು ಜೀವಿಸುತ್ತಿದ್ದೇವೆ. ಆದರೆ ಕೆಲವರು ಸೈನಿಕರ ಪ್ರಾಣ ಬಲಿದಾನವನ್ನೇ ಬಂಡವಾಳವಾಗಿಸಿಕೊಂಡು ರಾಜಕೀಯ ಮಾಡುವ ಮೂಲಕ ಸೈನಿಕರ ತ್ಯಾಗಕ್ಕೆ ಅಪಮಾನ ಮಾಡುತ್ತಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಯುವ ಘಟಕದ ಮೈನುದ್ದೀನ್, ಕಾಂಗ್ರೆಸ್ ಪರಿಶಿಷ್ಟ ಜಾತಿ ಘಟಕದ ರಂಗನಾಥ್ ಮಾತನಾಡಿದರು.

ಪಾಲಿಕೆ ಸದಸ್ಯ ಜಿ.ಎಸ್.ಮಂಜುನಾಥ್, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಮಹಿಳಾ ಕಾಂಗ್ರೆಸ್‌ನ ಶ್ರೀಮತಿ ಕವಿತಾ ಚಂದ್ರಶೇಖರ್, ಶ್ರೀಮತಿ ಗೀತಾ ಚಂದ್ರಶೇಖರ್, ಶ್ರೀಮತಿ ರಾಜೇಶ್ವರಿ, ಶ್ರೀಮತಿ ಶುಭಮಂಗಳ, ಶ್ರೀಮತಿ ಶಿಲ್ಪಾ, ಶ್ರೀಮತಿ ಮಂಜುಳಾ, ಕಿಸಾನ್ ಕಾಂಗ್ರೆಸ್‌ನ ಸುರೇಶ್ ಜಾಧವ್, ಜಿಕ್ರಿಯಾ, ಸಾಮಾಜಿಕ ಜಾಲತಾಣದ ಗೋವಿಂದ್ ಹಾಲೇಕಲ್ಲು, ಯುವ ಕಾಂಗ್ರೆಸ್‌ನ ಸಾಗರ್ ಎಲ್‌ಎಂಹೆಚ್., ರಾಕೇಶ್, ಮುಖಂಡರುಗಳಾದ ಶ್ರೀಕಾಂತ್ ಬಗರೆ, ಅಭಿ ಬೇತೂರು, ಆರೋಗ್ಯ ಸ್ವಾಮಿ, ಯುವರಾಜ್ ಮತ್ತಿತರರಿದ್ದರು.

## ಶ್ರೀಮತಿ ದಾಕ್ಷಾಯಿಣಿ ನಿಧನ



ದಾವಣಗೆರೆ ತಾಲ್ಲೂಕು ಹಿರೇತೊಗಲೇರಿ ಗ್ರಾಮದ ವಾಸಿ ಶ್ರೀ ಜಿ.ಎಸ್. ರೇವಣಸಿದ್ದಪ್ಪ ಅವರ ಧರ್ಮಪತ್ನಿ **ಶ್ರೀಮತಿ ದಾಕ್ಷಾಯಿಣಿ** ಅವರು ದಿನಾಂಕ 26.07.2021ರ ಸೋಮವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 55 ವರ್ಷ ವಯಸ್ಸಾಗಿತ್ತು. ಮೃತರು ಪತಿ, ಇಬ್ಬರು ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 27.07.2021ರ ಮಂಗಳವಾರ ಬೆಳಿಗ್ಗೆ 11.30 ಗಂಟೆಗೆ ಹಿರೇತೊಗಲೇರಿ ಗ್ರಾಮದಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ

ಪತಿ : ಶ್ರೀ ಜಿ.ಎಸ್. ರೇವಣಸಿದ್ದಪ್ಪ, ಮಕ್ಕಳಾದ : ಪ್ರತಿಭ, ಪ್ರಜ್ವಲ್, ಗಂಗನಕಟ್ಟೆ ವಂಶಸ್ಥರು, ಸಣ್ಣರೇವಪ್ಪರ ವಂಶಸ್ಥರು, ಹಿರೇತೊಗಲೇರಿ ಹೊಸಹಳ್ಳಿ ಹನುಮಂತಪ್ಪ ಹಾಗೂ ಮಕ್ಕಳು, ಬಸವಾಪಟ್ಟಣ.

## ಅಶ್ರುತರ್ಪಣ



ಜನನ : 17.08.1994

ಮರಣ : 27.07.2019

**ಪಿ. ಬಂಗಾರ ಶ್ರೀನಿವಾಸ್** B.E.,

ಪ್ರೀತಿಯಾ ಕಂದಾ...
ನಿನ್ನ ಅಗಲಿಕೆಯ ನೋವಿನ ದಿನಗಳುರುಳಿ
ಇಂದಿಗೆ 2 ವರ್ಷಗಳಾದವು. ಕ್ರೂರ ವಿಧಿಯಾಟ...
ನಿನ್ನ ರೂಪವೇ ನಮಗೆ ಸವಿನೆನಪು
ನಿನ್ನ ಸವಿ ಮಾತುಗಳೇ ಜೀವದ ಉಸಿರು
ನಿನ್ನೊಂದಿಗೆ ಕಳೆದ ದಿನಗಳ ನೆನಪೇ ಜೀವದ ಶಕ್ತಿ
ನಿನ್ನ ಪವಿತ್ರ ಆತ್ಮಕ್ಕೆ ಶಾಂತಿ ಸಿಗಲಿ ಕಂದಾ...
ಹೇ ಭಗವಂತಾ...ಮತ್ತೆ ಕೊಡು ನನ್ನ ಕಂದನನು ಮರಳಿ
ಬೇಡುವೆವು ಅನುದಿನವು ನಿನ್ನಲಿ...

ದುಃಖತಪ್ತ

ತಂದೆ-ತಾಯಿ, ಅಕ್ಕ-ಭಾವ, ಚಿಕ್ಕಪ್ಪಂದಿರು, ಚಿಕ್ಕಮ್ಮಂದಿರು, ಅತ್ತೆಯಂದಿರು, ಮಾವಂದಿರು, ಸಹೋದರರು, ಸಹೋದರಿಯರು, ಹಾಗೂ ಬಂಧುಗಳು-ಮಿತ್ರರು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte